ಜನಪದ ಸೇವಕ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ–೯ ಮಾರ್ಚ್–೨೦೦೯ ಸಂಚಿಕೆ–೮



ಅನೀತಿಯತ್ತ ಸಮಾಜ ತೀರ್ಪು ಯಾರಿಂದ?

ಜನಪದ ವಿಚಾರದಲ್ಲಿ

ಮಾರ್ಚ್-2009

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮಾರ್ಚ್ - ೨೦೦೮
ಸಂಪುಟ - ೯
ಸಂಚಿಕೆ - ೮

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

08236 316344

e-mail : janapada@yahoo.com
web: janapada.net

ದರ್ಜಿಯಾಗಿದ್ದರೆ ನಾ..!

ದರ್ಜಿಯಾಗಿದ್ದರೆ ನಾ....
ಹಾಕುತ್ತಿದ್ದೆ ಹೊಲಿಗೆಯ
ಚೂರಾದ ಮಡಿಕೆ-ಕುಡಿಕೆ ಗುಡಾಣಗಳಿಗೆ
ಕಿತ್ತು ಪಚಡಿಯಾದ ಬಿದುರಿನ ಪುಟ್ಟಿ-ಮೊರ,
ತಟ್ಟೆಗಳಿಗೆ, ಗಾಜಿನ ಲೋಟಗಳಿಗೆ,
ಹರಿದ ಮನಕೆ, ಮುರಿದ ಮನೆಗೆ.

ಬಿರುಕು ಬಿಟ್ಟ ಗೋಡೆಗಳ
ಬಿರಿದು ಬಾಯ್ಬಿಟ್ಟ ಭೂಮಿಯ
ಛಿದ್ರಗೊಂಡ ಮನಸುಗಳ
ಸೇರಿಸುತ್ತಿದ್ದೆ ನನ್ನ ಬಿಗಿ ಹೊಲಿಗೆಯಿಂದ.

ಚೂರಾದ ಸಂಸಾರಗಳ
ನುಚ್ಚು ನೂರಾದ ಕನಸುಗಳ
ಸೂಜಿ ಮೊನೆಯ ದಾರಕ್ಕೆ
ಒಡೆದು ರಕ್ತ ಕಾರುವ

ಹಸಿಹೃದಯಕ್ಕೆ
ಬಿಸಿಮಂತ್ರಗಳ ತೇಪೆಹಾಕಿ
ಶಾಂತಿಯಿಂದ ಹೊಲಿಯುತಿದ್ದೆ.

ಚದುರಿದ ಜನಗಳ
ಕಿತ್ತು ಜೋತಾಡುವ ಸೀಮೆಗಳ
ಕೂಡಿಸುತ್ತಿದ್ದೆ
ನನ್ನ ಕರುಳಿನ ದಾರದಿಂದ
ಸೊರಗಿ ಬಿದ್ದ ಜೀವಗಳಿಗೆ
ಮೃತವಾಗದಂತೆ
ಗುಂಡಿಗೆಯ ಪೋಣಿಸಿ
ಜೀವ ಕೊಡುತ್ತಿದ್ದೆ.

ಬಿಸಿ ರಕ್ತದ ಕೀಲೆಣ್ಣೆ ಹಾಕಿ
ರಭಸದಿಂದ ಹೊಲಿಯದೆ
ಮೃಧುವಾದ ಮನಸುಗಳ ಮೇಲೆ
ಮೆಲ್ಲಗೆ ಕೆತ್ತುತ್ತಿದ್ದೆ ಸತ್ಯದ ನಿಲುವುಗಳ

ಚಿತ್ರವಿಚಿತ್ರವಾದ ಕುಲ-ಜಾತಿ
ಮತ-ಧರ್ಮಗಳ
ಹೆಣೆಯುತ್ತಿದ್ದೆ
ನನ್ನ ನಿಮಿರಿದ ನರಗಳ ನೂಲಿನಿಂದ
ಮನುಷ್ಯತ್ವದೆಡೆಗೆ.

- ಮುಳ್ಳೂರು ಶಿವಮಲ್ಲು

(ಸಾಭಾರ : ಅನಿಕೇತನ)

ವಿಚಾರ ದೀಪ್ತಿ

ಆರ್ಥಿಕ ಸಂಕಷ್ಟಕ್ಕೆ ಪರಿಹಾರ

ಈ ವರ್ಷದ ಜನವರಿ ೨೬ ರಂದು ಅಮೇರಿಕಾದ ಮಹತ್ವದ ಕಾರ್ಪೊರೇಶನ್‌ಗಳಾದ ಕ್ಯಾಟ್‌ಪಿಲ್ಲರ್, ಹೋಮ್‌ಡಿಪೊ, ಫೈಜರ್, ಸ್ಪಿಂಟನೆಕ್ಸ್‌ಟೆಲ್ ಮತ್ತು ಜಿ.ಎಂ. ಹೊಸದಾಗಿ ೭೪ ಸಾವಿರ ಕೆಲಸಗಳನ್ನು ಕಡಿತಗೊಳಿಸಿದವು. ಒಬಾಮಾ ಆಡಳಿತದ ಉದ್ದೇಶಿತ ಗುರಿ ಮೂರರಿಂದ ನಾಲ್ಕು ದಶಲಕ್ಷ ಉದ್ಯೋಗಗಳನ್ನು ಮುಂದಿನ ಎರಡು ವರ್ಷದಲ್ಲಿ ನಿರ್ಮಿಸಲಾಗುವುದೆಂಬುದು ೨೦೧೦ರ ವೇಳೆಗೆ೧೦ ದಶಲಕ್ಷ ಉದ್ಯೋಗಗಳು ಕಡಿತಗೊಳ್ಳುವುದಕ್ಕೆ ಸಮಾನಾಗಲಾರದು. ಆರ್ಥಿಕ ದುರಂತಕ್ಕೆ ತಕ್ಷಣದ ಕಾರಣ ಸಾಲ ವ್ಯವಹಾರವನ್ನು ಕಾಪಾಡಿಕೊಂಡು ಬರುವುದಕ್ಕೆ ಬೇಕಾದ ಸಂಪನ್ಮೂಲಗಳು ಬ್ಯಾಂಕುಗಳಲ್ಲಿ ಇಲ್ಲದೆ ಇರುವುದಾಗಿದೆ.

ಎರಡನೆಯ ಮುಖ್ಯ ಕಾರಣ, ಯಾವ ಬೆಲೆಯೂ ಇಲ್ಲದ ಪರ್ಯಾಯ ಮಾರ್ಗಗಳು ಅಡವಿನ ಆಧಾರದ ಭದ್ರತೆಗಳು; ಈಗ ಇವು ತಿಪ್ಪೆಗೆಸೆಯಲು ಯೋಗ್ಯವಾದ ಬಾಂಡ್‌ಗಳಾಗಿ ಪರಿವರ್ತಿತಗೊಂಡಿವೆ. ಬ್ಯಾಂಕ್‌ಗಳಿಗೂ ಮತ್ತು ಕಂಪೆನಿಗಳಿಗೂ ಹಣ ಎಸೆಯುವ ಮೂಲಕ ಸಮಸ್ಯೆಯನ್ನು ಪರಿಹರಿಸಲು ಅಮೇರಿಕಾ ಸರ್ಕಾರ ಮಾಡುತ್ತಿರುವ ಪ್ರಯತ್ನ ನಿಷ್ಪ್ರಯೋಜಕವಾದದ್ದು. ಬೃಹತ್ ಕಂಪೆನಿಗಳನ್ನೂ ಒಳಗೊಂಡಂತೆ ಇಡೀ ಬ್ಯಾಂಕಿಂಗ್ ವ್ಯವಸ್ಥೆಯನ್ನು ರಾಷ್ಟ್ರೀಕರಣಗೊಳಿಸುವುದು, ಈ ಸಮಸ್ಯೆಯ ಪರಿಹಾರಕ್ಕೆ ಅಗತ್ಯವಾಗಿದೆ. ಇಂಗ್ಲೆಂಡ್ ಸರ್ಕಾರ ಈಗಾಗಲೇ ಕೆಲವು ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿದೆ. ಹಣಕಾಸಿನ ಸೇವೆ ಸಲ್ಲಿಸುತ್ತಿರುವ ಕಂಪೆನಿಗಳು ಅನುಭವಿಸುತ್ತಿರುವ ನಷ್ಟಕ್ಕೆ ಆ ಕಂಪೆನಿಗಳ ಹಿರಿಯ ಶ್ರೇಣಿಯ ಕಾರ್ಯಾಧಿಕಾರಿಗಳು ಪಡೆಯುತ್ತಿರುವ ಅತಿಯಾದ ಸಂಬಳ. ಇವರು ತಮ್ಮ ಸಂಬಳ ಮತ್ತು ಕಮಿಷನ್‌ಗಳಿಗಾಗಿ ಠೇವಣಿದಾರರ ಹಣವನ್ನು ಉಪಯೋಗಿಸಿಕೊಂಡಿದ್ದಾರೆ.

ಈ ಹಿಂದೆ ಎಂದೂ ಪಡೆಯದಷ್ಟು ಗರಿಷ್ಠ ಸಂಬಳವನ್ನು "ವಾಲ್‌ಸ್ಟ್ರೀಟ್" ಪ್ರಧಾನ ಅಧಿಕಾರಿಗಳು ಪಡೆದಿದ್ದಾರೆ. ಈಗ ಈ ನಷ್ಟಗಳನ್ನು ತುಂಬಿಕೊಡಲು ಜನತೆಯನ್ನು ಕೇಳುತ್ತಿದ್ದಾರೆ.೧೯೩೦ರ ದಶಕದಲ್ಲಿ ಉಂಟಾಗಿದ್ದ ಆರ್ಥಿಕ ಅದೋಗತಿಯ ನಂತರ ಅಧ್ಯಕ್ಷ ರೂಸ್‌ವೆಲ್ಟ್ ರೂಪಿಸಿದ ನೀತಿ ಉತ್ಪಾದನೆ ಮತ್ತು ಹಂಚಿಕೆಯ ಸಾಧನಗಳು ಸಾರ್ವಜನಿಕರ ಒಡೆತನಕ್ಕೆ ಸೇರಬೇಕೆಂಬುದು ಪ್ರಚಾರಕ್ಕೆ ಬಂದಿತು. ಮತ್ತು ಸರ್ಕಾರದ ಮಧ್ಯಸ್ಥಿಕೆ ಮತ್ತು ಕಟ್ಟುನಿಟ್ಟಾದ ನಿಯಮಾವಳಿಗಳು ಜಾರಿಗೆ ಬರಬೇಕೆಂದು ರೂಸ್‌ವೆಲ್ಟ್ ಬಯಸಿದ್ದರು. ಆಗ ಉತ್ತಮ ರೀತಿಯಲ್ಲಿ ಸಂಪನ್ಮೂಲಗಳು ದೊರೆಯುವಂತೆ ಮಾರುಕಟ್ಟೆಯನ್ನು ಸರ್ಕಾರ ನಿಯಂತ್ರಿಸಬೇಕು. ಜನರಿಗೆ ಅಗತ್ಯವಾದ ಮನೆಗಳ ನಿರ್ಮಾಣವನ್ನು ಸರ್ಕಾರವೇ ನೆರವೇರಿಸಬೇಕು ಏಕೆಂದರೆ ವಸತಿ ಊಹಾಪೋಹದ ವಸ್ತುವಲ್ಲ. ಅದು ನಾಗರೀಕರ ಮೂಲಭೂತ ಹಕ್ಕು. ಹೀಗೆ ಆದಾಗ ಮಾತ್ರ ದೇಶಗಳ ಆರ್ಥಿಕ ವ್ಯವಹಾರಗಳಲ್ಲಿ ತಿಳುವಳಿಕೆ ಬರಲು ಸಾಧ್ಯ.

– ದೀಪಕ್ ಬಸು

(ನಾಗಾಸಾಕಿ ವಿಶ್ವವಿದ್ಯಾನಿಲಯದ ಅಂತಾರಾಷ್ಟ್ರೀಯ ಅರ್ಥಶಾಸ್ತ್ರದ ಪ್ರೊಫೆಸರ್)

ಅನೀತಿಯತ್ತ ಸಮಾಜ, ತೀರ್ಪು ಯಾರಿಂದ?

– *ಸುರೇಂದ್ರ ಕೌಲಗಿ*

ಇತ್ತೀಚಿಗೆ ಮಂಗಳೂರಿನಲ್ಲಿ ಕೆಲ ಪಬ್‌ಗಳ ಮೇಲೆ ಸಂಘಟನೆಯೊಂದು ದಾಳಿ ಮಾಡಿತು. ಅಲ್ಲಿ ಅಶ್ಲೀಲವಾಗಿ ಕುಣಿಯುತ್ತಿದ್ದರೆನ್ನಲಾದ ಕೆಲ ಯುವತಿಯರ ಮೇಲೆ ಕೈ ಮಾಡಿತು; ಅವರನ್ನು ಅವಮಾನಗೊಳಿಸಿತು. ಈ ಘಟನೆ ದೇಶಾದ್ಯಂತ ಬಹು ದೊಡ್ಡ ಸುದ್ದಿಯಾಯಿತು. ವಿದೇಶದ ಮಾಧ್ಯಮಗಳಲ್ಲೂ, ದೂರದರ್ಶನದ ಮಾಧ್ಯಮಗಳಲ್ಲೂ ಅನೇಕ ದಿನಗಳ ವರೆಗೆ ಪಬ್ ದಾಳಿಯೇ ಮುಖ್ಯವಾಯಿತು. ಪಬ್ ಮೇಲಿನ ದಾಳಿಯು ಅನೇಕ ಪ್ರಕಾರವಾಗಿ ವಿಮರ್ಷೆಗೆ ಒಳಗಾಯಿತು. ಕಾನೂನು–ಶಿಸ್ತು ಪರಿಪಾಲನೆಯ ವಿಷಯದೊಂದಿಗೆ ಪಬ್‌ನಲ್ಲಿ ನಡೆಯುತ್ತಿದ್ದದ್ದನ್ನು ತಡೆಯುವ ಹಕ್ಕನ್ನು ಆ ಸಂಘಟನೆಗೆ ಕೊಟ್ಟವರಾರು; ಅಲ್ಲಿ ನಡೆಯುತ್ತಿದ್ದುದು ಅನೀತಿಯುತವಾದಂಥದು, ದೇಶದ ಸಂಸ್ಕೃತಿಗೆ ಕಳಂಕ ತರುವಂಥಾದುದು ಎಂದು ತೀರ್ಮಾನಿಸುವ ಹೊಣೆಯನ್ನು ಆ ಸಂಘಟನೆಗೆ ಕೊಟ್ಟವರಾರು ಇತ್ಯಾದಿ ಮೂಲಭೂತ ಪ್ರಶ್ನೆಗಳನ್ನು ಎತ್ತಲಾಯಿತು. ಆ ಸಂಘಟನೆಯ ಸ್ವಯಂ ಪೋಲೀಸಗಿರಿಯು ಎಷ್ಟು ನ್ಯಾಯೋಚಿತವಾದುದು ಎಂದೂ ಕೇಳಲಾಯಿತು. ಪಬ್ ಮೇಲಿನ ದಾಳಿಯ ಕಾವು ಇಳಿಯುವ ಹೊತ್ತಿಗೆ ಪ್ರೇಮಿಗಳ ದಿನಾಚರಣೆ ಬಂತು. ಈ ದಿನಾಚರಣೆಯಂದು ಪ್ರೇಮಿಗಳು ಸಾರ್ವಜನಿಕವಾಗಿ ತಬ್ಬಿಕೊಳ್ಳುವುದು, ಪರಸ್ಪರ ಮುತ್ತಿಡುವುದು ಮುಂತಾದ ಕ್ರಿಯೆಗಳು ಅಸಭ್ಯ ವರ್ತನೆಯಲ್ಲ ಎಂಬ ಅಭಿಪ್ರಾಯಗಳು ಸಾರ್ವಜನಿಕವಾಗಿ ಕೇಳಿ ಬಂದವು. ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿರುವ ರೇಣುಕಾ ಚೌಧರಿಯವರು ಮಂಗಳೂರಿಗೆ ಬಂದು ಅಲ್ಲಿಯ ಘಟನೆಗಳು ತಾಲಿಬಾನ್ ಮನೋವೃತ್ತಿಯನ್ನು ಪ್ರಕಟಪಡಿಸುತ್ತದೆ ಎಂದು ಹೇಳಿಕೆಕೊಟ್ಟರು. ಪ್ರತಿಯೊಬ್ಬರಿಗೂ ಸ್ವಾತಂತ್ರ್ಯವಿದೆ, ಅವರೇ ಸ್ವತಃ ಯಾವುದು ಉಚಿತ, ಯಾವುದು ಅನುಚಿತ ಎಂಬ ತೀರ್ಮಾನ ಕೈಗೊಳ್ಳಬೇಕೇ ಹೊರತು ಅವರ ಮೇಲೆ ಯಾವುದೇ ಸಂಘಟನೆ ನೀತಿ ಸಂಹಿತೆಯನ್ನು ಹೇರಲು ಅವಕಾಶವಿಲ್ಲ ಎಂಬ ಅಭಿಪ್ರಾಯ ಕೇಳಿಬಂತು. ಅಲ್ಲದೆ, ಬೆಳೆಯುತ್ತಿರುವ ಮಕ್ಕಳನ್ನು ಸರಿಯಾದ ದಾರಿಯಲ್ಲಿ ಬೆಳೆಸಬೇಕಾದದ್ದು ಆಯಾ ಮಕ್ಕಳ ತಂದೆ–ತಾಯಿಗಳ, ಪೋಷಕರ ಜವಾಬ್ದಾರಿಯೆಂಬ ಅಭಿಪ್ರಾಯವೂ ಕೇಳಿಬಂತು.

ಪಬ್ ಮೇಲಿನ ದಾಳಿಯ ಮಾತು ಮರೆಯಾಗುತ್ತಲಿರುವಾಗ "ಸ್ಲಂ ಡಾಗ್ ಮಿಲಿಯನೇರ್" ಸಿನಿಮಾಕ್ಕೆ ಈ ವರ್ಷದ ಆಸ್ಕರ್ ಪ್ರಶಸ್ತಿಗಳ ಸುರಿಮಳೆಯಾಯಿತು. ಇದು ಕೂಡ ನೀತಿ–ಅನೀತಿಯ ವಿವಾದದ ಸುಳಿಗೆ ಸಿಕ್ಕಿಹಾಕಿಕೊಂಡಿತು. ಕೆಲವರು ಆಸ್ಕರ್ ಪ್ರಶಸ್ತಿ ಭಾರತಕ್ಕೆ ಸಂದ ಗೌರವವೆಂದು ಭಾವಿಸಿದರೆ, ಇನ್ನು ಕೆಲವರು ಈ ಪ್ರಶಸ್ತಿ ಭಾರತದ ಗೌರವವನ್ನು ಹರಾಜಿಗೆ ಹಾಕಿದಂತಾಗಿದೆಯೆಂದು ನೊಂದು ನುಡಿದರು. ಈ ಚಲನಚಿತ್ರವು ಭಾರತದ ಪ್ರಗತಿಯ ಸಕಾರಾತ್ಮಕ ಭಾಗವನ್ನು ತೋರಿಸದೆ ನಕಾರಾತ್ಮಕ ಭಾಗವನ್ನು ತೋರಿಸಿದೆ ಎಂದು ಹೇಳಿದರು. ಈ ಚಲನಚಿತ್ರ ಪ್ರದರ್ಶಿತಗೊಂಡ ಮೇಲೆ

ಸ್ವಾತಂತ್ರ್ಯ ಪೂರ್ವದ ಹಿರಿಯ ನಾಗರಿಕರಿಗೆ ೧೯೨೭ರಲ್ಲಿ ಅಮೇರಿಕದ ಲೇಖಕಿ ಕುಮಾರಿ ಕ್ಯಾಥರೀನ್ ಮೇಯೋ ಮದರ್ ಇಂಡಿಯಾ ಎಂಬ ಪುಸ್ತಕ ಬರೆದದ್ದೂ, ಅದನ್ನು ಗಾಂಧೀಜಿ ಡ್ರೈನ್ ಇನ್‌ಸ್ಪೆಕ್ಟರ್ಸ್ ರಿಪೋರ್ಟ್ ಎಂದು ಟಿಪ್ಪಣಿ ಮಾಡಿದ್ದೂ ನೆನಪಿಗೆ ಬಂತು. ಆ ಸಮಯದಲ್ಲಿ ಗಾಂಧೀಜಿಯವರು ಯಂಗ್ ಇಂಡಿಯಾದಲ್ಲಿ ಬರೆದ ಅಭಿಪ್ರಾಯಗಳು "ಸ್ಲಂ ಡಾಗ್ ಮಿಲಿಯನೇರ್" ಚಲನಚಿತ್ರದ ಬಗ್ಗೆ ಬಹಳಷ್ಟು ಅನ್ವಯಿಸುತ್ತವೆಂದರೆ ತಪ್ಪಾಗಲಾರದು.

ಈ ಪ್ರಕಾರದ ಘಟನೆಗಳು ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಂಭವಿಸುತ್ತಿರುವಾಗ ರಾಜಕೀಯ ಕ್ಷೇತ್ರವು ಹಿಂದೆ ಬೀಳಲಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ೨೦೦೯-೧೦ನೇ ಸಾಲಿನ ಮಧ್ಯಂತರ ಬಜೆಟ್ ಮಂಡಿಸಿದವು. ಈ ಬಜೆಟ್ ಮುಂದಿನ ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಹದಿನೈದನೇ ಲೋಕಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಮಂಡಿಸಲ್ಪಟ್ಟವು. ಈ ಬಜೆಟ್‌ಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಮತ್ತು ಜನಕಲ್ಯಾಣದ ಹೆಸರಿನಲ್ಲಿ ಹಣದ ಹೊಳೆಯನ್ನು ಹರಿಸುವ ಪ್ರಯತ್ನವಲ್ಲದೆ ಬಿದ್ದು ಹೋಗುತ್ತಿರುವ ಮಾನವೀಯ ಮೌಲ್ಯಗಳ ಪುನಶ್ಚೇತನದ ಬಗ್ಗೆ ಲವಲೇಶವೂ ಪ್ರಯತ್ನವಿರುವಂತೆ ಕಾಣಲಿಲ್ಲ. ಜಾಗತಿಕ ಆರ್ಥಿಕ ಕುಸಿತ, ರಾಜಕೀಯ ನೀತಿ ಕುಸಿತ, ಹವಾಮಾನದಲ್ಲಿಯ ಸಮತೋಲನದ ಕುಸಿತ ಬರಲಿರುವ ದಿನಮಾನಗಳು ಮಾನವ ಸಮೂಹಕ್ಕೆ ಸಕಲ ರೀತಿಯಲ್ಲೂ ಸಂಕಟಮಯವಾಗಿ ಪರಿಣಮಿಸುವ ಸೂಚನೆಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ.

ಇತ್ತೀಚೆಗೆ ಚೆನ್ನೈನಲ್ಲಿ ವಕೀಲರಿಗೂ, ಪೋಲಿಸರಿಗೂ ಕೋರ್ಟ್ ಆವರಣದಲ್ಲೇ ಝುಟಾಪಟಿ ನಡೆಯಿತು. ಈ ಘಟನೆಗೆ ಕಾರಣವೇನೇ ಇದ್ದರೂ ಹೊಡೆದಾಟ ನಡೆದದ್ದು ನ್ಯಾಯ ರಕ್ಷಣೆಯ ಹೊಣೆಗಾರಿಕೆಯಿರುವ ಎರಡು ಸಮುದಾಯಗಳ ಮಧ್ಯ. ಇಂಥ ಘಟನೆ ನ್ಯಾಯಾಂಗವನ್ನೂ, ಕಾರ್ಯಾಂಗವನ್ನೂ ಸಮವಾಗಿ ಗೌರವಿಸುವ ಸಂವಿಧಾನ ಹೊಂದಿರುವ ಪ್ರಜಾತಂತ್ರ ವ್ಯವಸ್ಥೆಯ ಭಾರತದಲ್ಲಿ ಎಂಬುದು ಭಾರತೀಯರೆಲ್ಲರು ನಾಚಿಕೆಯಿಂದ ತಲೆತಗ್ಗಿಸುವಂಥ ಪ್ರಸಂಗವಾಯಿತು. ಈ ಘಟನೆಯಿಂದ ಸ್ಪಷ್ಟವಾಗಿ ಗೊತ್ತಾದುದೇನೆಂದರೆ ನ್ಯಾಯಾಂಗವೂ ಅನೀತಿಯ ದಾರಿ ತುಳಿಯಲು ಸಂಕೋಚ ಪಡುವುದಿಲ್ಲವೆಂಬುದು ಮತ್ತು ಕಾರ್ಯಾಂಗವೂ ಅನೀತಿಯ ದಾರಿ ತುಳಿಯಲು ಸಂಕೋಚಪಡುವುದಿಲ್ಲವೆಂಬುದು. ಈಗಾಗಲೇ ಶಾಸಕಾಂಗ ಅನೀತಿಯ ದಾರಿಯಲ್ಲಿ ಹಿಂದೆ ಬರಲಾಗದಷ್ಟು ದೂರ ಸಾಗಿ ಹೋಗಿದೆ. ಅನೀತಿಗೊಳ್ಳುವುದರಲ್ಲಿ ಈ ಎರಡು ಅಂಗಗಳಿಗಿಂತ ತಾನೇನು ಕಡಿಮೆಯೆಂದು ದೇಶದ ಸಾಮಜಿಕ, ಸಾಂಸ್ಕೃತಿಕ ಕ್ಷೇತ್ರಗಳು ಸ್ಪರ್ಧೆ ನಡೆಸಿವೆ. ಸಿನಿಮಾಗಳು, ದೂರದರ್ಶನಗಳು, ಪತ್ರಿಕೆಗಳು ದೇಶವನ್ನು ಅನೀತಿಯತ್ತ ಒಯ್ಯಲು ಬಹುಮಟ್ಟಿಗೆ ಕಾರಣಗಳಾಗುತ್ತಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ಯಾವ ಯಾವ ಸಂಗತಿಗಳು ಅನೀತಿಯುತ ಎಂದು ತಿಳಿಯಲಾಗುತ್ತಿತ್ತೋ ಆ ಸಂಗತಿಳನ್ನೇ ಸ್ವಾತಂತ್ರ್ಯ ನಂತರದ ಭಾರತದಲ್ಲಿ ನೀತಿಯುತ ಎಂದು ಭಾವಿಸಲಾಗುತ್ತಿರುವುದು ಎಂಥ ಗಂಭೀರವಾದ ಸಮಸ್ಯೆ. ಆದರೆ ಈ ಗಂಭೀರತೆಯ ಬಗ್ಗೆ ಯಾರು ಚಿಂತಿತರಾಗಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಜೊತೆಗೆ ನೀತಿಯಾವುದು, ಅನೀತಿಯಾವುದು ಎಂದು ತೀರ್ಮಾನಿಸುವವರು ಯಾರು

ಎಂಬುದೂ ಗೊತ್ತಾಗುತ್ತಿಲ್ಲ. ನೀತಿ ಅಥವಾ ಅನೀತಿಯ ವಿಷಯದಲ್ಲಿ ತೀರ್ಮಾನ ಕೈಗೊಳ್ಳುವಾಗ ದೇಶದ ಉಚ್ಚ ನ್ಯಾಯಾಲಯವೂ ಎಡವುತ್ತಾ ಬಂದಿದೆ. ಇದಕ್ಕೆಲ್ಲ ಮುಖ್ಯ ಕಾರಣ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ನಾಗರಿಕರಿಗೆ ಸಂವಿಧಾನಬದ್ಧವಾಗಿ ದತ್ತವಾಗಿರುವ ಮೂಲಭೂತ ಹಕ್ಕುಗಳು. ಮೂಲಭೂತ ಹಕ್ಕುಗಳ ಪ್ರತಿಪಾದನೆಯ ಮೂಲಕ ದೇಶ ಅನೀತಿಯತ್ತ ಹೋಗುತ್ತಿರುವಾಗ ಅದನ್ನು ತಡೆಯುವ ಶಕ್ತಿ ಯಾರಿಗಿದೆ? ಮತ್ತು ತಡೆಯುವ ಅಧಿಕಾರ ಯಾರಿಗಿದೆ?

ಈಗ ಯಾರು-ಯಾರು ಅನೈತಿಕ ಕೃತ್ಯಗಳಲ್ಲಿ ತೊಡಗಿದ್ದಾರೋ, ಅಥವಾ ಅನೈತಿಕ ಕೃತ್ಯಗಳಿಗೆ ಪ್ರೋತ್ಸಾಹ ಕೊಡುತ್ತಿದ್ದಾರೋ ಅವರೆಲ್ಲರೂ ತಮ್ಮ ಕೃತ್ಯಗಳಿಗೆ ಪ್ರಮುಖವಾಗಿ ಮೊರೆಹೋಗುವುದು ಸಂವಿಧಾನದತ್ತ ಮೂಲಭೂತ ಹಕ್ಕುಗಳನ್ನೇ. ಅವರ ನಿಲುವನ್ನು ಗಮನಿಸಿದರೆ ಪರೋಕ್ಷವಾಗಿ ಸಂವಿಧಾನ ಮತ್ತು ಅದರಲ್ಲಿ ಕಾಣಿಸಿದ ಹಕ್ಕುಗಳು ಮತ್ತು ಇತರ ವಿಧಿಗಳು ದೇಶದಲ್ಲಿ ಬೆಳೆಯುತ್ತಿರುವ ಅನೈತಿಕತೆಗೆ ಕಾರಣವೆಂದೆನಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಚಲನಚಿತ್ರಗಳು ಮತ್ತು ಸೆನ್ಸಾರ್ ಮಂಡಳಿಯನ್ನು ಗಮನಿಸಬಹುದು. ಯಾವುದೇ ಚಲನಚಿತ್ರದಲ್ಲಿ ಹಿಂಸೆ ಮತ್ತು ಅಶ್ಲೀಲತೆಯಿದೆಯೆಂದು ಸೆನ್ಸಾರ್ ಮಂಡಳಿ ಆ ಚಲನಚಿತ್ರವನ್ನು ನಿಷೇಧಿಸಿದರೆ ಆ ಚಿತ್ರದ ನಿರ್ಮಾಪಕರು ತಮ್ಮ ಅಭಿವ್ಯಕ್ತಿ ಸ್ವಾತಂತ್ರದ ಹಕ್ಕಿನ ಆಸರೆ ಪಡೆದು ನ್ಯಾಯಾಸ್ಥಾನಕ್ಕೆ ಹೋಗುತ್ತಾರೆ. ಆಗ ನ್ಯಾಯಾಧೀಶರು ಸಾಮಾನ್ಯವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಎತ್ತಿಹಿಡಿದು ನಿಷೇಧಿತ ಆ ಚಲನಚಿತ್ರಕ್ಕೆ ಮೋಕ್ಷ ಕಾಣಿಸುತ್ತಾರೆ. ನಿಷೇಧಿತ, ನಂತರ ಮೋಕ್ಷ ಪಡೆದ ಅನೇಕ ಚಲನಚಿತ್ರಗಳ ಹೆಸರನ್ನು ಹೇಳಬಹುದು. ಅವೆಲ್ಲವೂ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವುದರಿಂದ ಅವುಗಳ ಹೆಸರನ್ನು ಪುನಃ ಇಲ್ಲಿ ಹೇಳಬೇಕಾಗಿಲ್ಲ.

ಸ್ವಾತಂತ್ರ್ಯ ಪೂರ್ವದಲ್ಲಿಯ ಅನೀತಿ ಸ್ವಾತಂತ್ರ್ಯಾನಂತರ ನೀತಿಯುತವಾಗಿರುವ ಕೆಲವು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು.

ಸ್ವಾತಂತ್ರ್ಯ ಪೂರ್ವದಲ್ಲಿ ಮದ್ಯ ಸೇವನೆ ಮತ್ತು ಮದ್ಯ ಮರಾಟದಿಂದ ಬರುವ ತೆರಿಗೆ ಹಣ ಎರಡೂ ಅನೀತಿಯುತವಾದವುಗಳೆಂದು ತಿಳಿಯಲಾಗುತ್ತಿತ್ತು. ಆದ್ದರಿಂದ ಮದ್ಯ ಅಥವಾ ಸೇಂದಿಗೆ ಮೂಲ ಕಾರಣವಾಗಿದ್ದ ಈಚಲು ಮರಗಳನ್ನು ಕಡಿಯುವ ದೊಡ್ಡ ಆಂದೋಲನವೇ ನಡೆಯಿತು. ಅಷ್ಟೇ ಅಲ್ಲ, ಅದು ಸ್ವಾತಂತ್ರ ಚಳುವಳಿಯ ಒಂದು ಅಂಗವಾಗಿಯೂ ಇತ್ತು. ಮದ್ಯ ಮಾರುವ ಅಂಗಡಿಗಳ ಮುಂದೆ ಮಹಿಳೆಯರು ಮತ್ತು ಮಕ್ಕಳು ಪಿಕೆಟಿಂಗ್ ನಡೆಸಿ ಅವುಗಳನ್ನು ಮುಚ್ಚಿಸುವ ಪ್ರಯತ್ನ ಮಾಡುತ್ತಿದ್ದರು. ಆದರೆ ಸ್ವಾತಂತ್ರ್ಯ ಬಂದ ಕೂಡಲೆ ದೇಶದ ಎಲ್ಲ ರಾಜ್ಯಗಳಲ್ಲಿ ಮದ್ಯದ ಹೊಳೆ ಹರಿಯಲಾರಂಭಿಸಿತು. ಮದ್ಯದ ಮೇಲಿನ ತೆರಿಗೆ ಸರ್ಕಾರಗಳಿಗೆ ಬಹುದೊಡ್ಡ ಆದಾಯದ ಮೂಲವಾಯಿತು. ಆರ್ಥಿಕೋನ್ನತಿಯ ಹೆಸರಿನಲ್ಲಿ ಪ್ರಾರಂಭವಾದ ಎಲ್ಲ ಸಕ್ಕರೆ ಕಾರ್ಖಾನೆಗಳು ಹೆಚ್ಚಿನ ಆದಾಯ ಪಡೆಯಲು ಮದ್ಯವನ್ನು ತಯಾರಿಸಲು ಪ್ರಾರಂಭಿಸಿದವು.

ಮದ್ಯದ ಮಾರಾಟದಿಂದ ಬರುವ ಹಣ ಪಾಪದ ಹಣ; ಆ ಪಾಪದ ಹಣದಿಂದ ಪಾಪದ ಸಂತಾನವೇ ಜನಿಸುತ್ತದೆಯೆಂದು ಗಾಂಧೀಜಿ ಹೇಳುತ್ತಿದ್ದರು. ಆದ್ದರಿಂದ ಆ

ಹಣವನ್ನು ಮುಖ್ಯವಾಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ರೂಪದಲ್ಲಿ ಕೊಡುವುದು ತರವಲ್ಲವೆಂದು ಅವರು ಹೇಳುತ್ತಿದ್ದರು. ಅಷ್ಟೇ ಅಲ್ಲ, "ತಮಗೇನಾದರೂ ಕೇವಲ ಒಂದು ಗಂಟೆ ಭಾರತದ ಸರ್ವಾಧಿಕಾರಿ ಅಧಿಕಾರವನ್ನು ಕೊಟ್ಟರೆ ಎಲ್ಲ ಮದ್ಯದಂಗಡಿಗಳನ್ನು ಯಾವ ಪರಿಹಾರವನ್ನೂ ಕೊಡದೆ ಮುಚ್ಚುವುದಾಗಿ" ಹೇಳಿದ್ದರು.

ಎರಡನೆಯ ಮುಖ್ಯವಾದ ಅನೀತಿ ಭ್ರಷ್ಟಾಚಾರ. ಸ್ವಾತಂತ್ರ್ಯ ಪೂರ್ವದಲ್ಲಿ ಲಂಚ ಪಡೆಯುವುದು ಲಂಚ ಕೊಡುವುದು ಅನೀತಿಯ ಮಾರ್ಗವೆಂದು ಪರಿಭಾವಿಸಲಾಗಿತ್ತು. ಸರ್ಕಾರ ಕೊಡುವ ವೇತನದಲ್ಲಿಯೇ ಸಂತುಷ್ಟರಾಗಿದ್ದುಕೊಂಡು ನೌಕರರು ಶ್ರದ್ಧೆಯಿಂದ ಕೆಲಸಮಾಡುತ್ತಿದ್ದರು. ಆದರೆ ಇಂದು ಲಂಚವೆನ್ನುವುದು ಭ್ರಷ್ಟಾಚಾರದ ರೂಪತಾಳಿ ಇಡೀ ದೇಶವನ್ನೇ ಆಪೋಷಣೆ ಮಾಡಿಕೊಳ್ಳುವುದರಲ್ಲಿದೆ. ಭ್ರಷ್ಟತೆಯೆಂಬುದು ಯಾರಿಗೂ ಅನೀತಿಯೆನಿಸುವುದೇ ಇಲ್ಲ. ಪ್ರತ್ಯಕ್ಷವಾಗಿ–ಪರೋಕ್ಷವಾಗಿ ನ್ಯಾಯಾಂಗವೂ ಭ್ರಷ್ಟಾಚಾರವನ್ನು ಬೆಳೆಸಿದೆ. ಭ್ರಷ್ಟರ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳಲು ನ್ಯಾಯಾಂಗ ಮತ್ತು ಕಾರ್ಯಾಂಗ ವಿಫಲವಾಗಿವೆ.

ಮೂರನೆಯ ಅನೀತಿ, ದೇಶದ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ಯಾವುದೇ ಆದರ್ಶ–ತತ್ವ–ಸಿದ್ಧಾಂತ–ನೈತಿಕ ಮೌಲ್ಯಗಳನ್ನು ಹೊಂದದೇ ಇರುವುದು. ಇಂದು ದೇಶದಲ್ಲಿ ಮಾನ್ಯತೆ ಪಡೆದ ಸುಮಾರು ಇಪ್ಪತ್ತು ರಾಜಕೀಯ ಪಕ್ಷಗಳಿವೆ, ಇವಲ್ಲದೆ ಹಲವಾರು ಪ್ರಾದೇಶಿಕ ಪಕ್ಷಗಳಿವೆ. ಇವುಗಳಲ್ಲಿ ಯಾವುದೇ ಒಂದು ರಾಜಕೀಯ ಪಕ್ಷಕ್ಕೂ ಅಧಿಕಾರ ದಾಹವಲ್ಲದೆ ಬೇರೆ ಯಾವುದೇ ಸಿದ್ಧಾಂತ ಚಲನಶೀಲತೆಯನ್ನು ಕೊಟ್ಟಿಲ್ಲ. ರಾಜಕೀಯ ಪಕ್ಷಗಳು ಮತ್ತು ಅವುಗಳ ಮುಖಂಡರು ಹೋರಾಡುತ್ತಿದ್ದರೆ, ಹಾರಾಡುತ್ತಿದ್ದರೆ, ಓಡಾಡುತ್ತಿದ್ದರೆ ಅದಕ್ಕೆ ಇಂಧನ ಅಧಿಕಾರದಾಸೆ. ಯಾವುದೇ ಒಂದು ರಾಜಕೀಯ ಪಕ್ಷ ಮೌಲ್ಯಾಧಾರಿತ ಆರೋಗ್ಯಪೂರ್ಣ ದೇಶವನ್ನು ಕಟ್ಟುವುದಾಗಿ ತನ್ನ ಪ್ರಣಾಳಿಕೆಯಲ್ಲಿ ಹೇಳಿಕೊಂಡಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಗ್ರಾಮೋದ್ಧಾರದ ಮಾತಾದರೂ ಇತ್ತು. ಇಂದು ಯೋಜನಾಬದ್ಧವಾಗಿಯೇ ಗ್ರಾಮಗಳನ್ನು ನಾಶಮಾಡಲು ಹೊರಟಿರುವಾಗ ಯಾವ ರಾಜಕೀಯ ಪಕ್ಷಕ್ಕೆ ತಾನೇ ಅಧಿಕಾರದ ಹುಚ್ಚಲ್ಲದೆ ಬೇರೆ ವಿಚಾರ ಇರಲು ಸಾಧ್ಯ? ಭಾರತ ಗ್ರಾಮಗಳ ದೇಶವಾಗಿತ್ತು. ಸಮಾಜ ಜೀವನ ಆ ಗ್ರಾಮಗಳ ಪರಿಧಿಯಲ್ಲಿಯೇ ಇತ್ತು. ಗ್ರಾಮಗಳ ನಾಶದೊಂದಿಗೆ ಸಮಾಜ ಜೀವನವೂ ನಾಶಗೊಂಡಿತು. ಸಮಾಜ ಜೀವನದ ನಾಶದೊಂದಿಗೆ ರಾಜಕೀಯ ಪಕ್ಷಗಳ ವಿಚಾರಶೀಲತೆಯೂ ನಾಶಗೊಂಡಿತು. ವಿಚಾರಶೀಲತೆಯ ನಾಶದಿಂದ ತಪ್ಪು ಅಭಿವೃದ್ಧಿ ನೀತಿ ಜಾರಿಗೆ ಬಂತು; ಪಾಶ್ಚಿಮಾತ್ಯ ಸಂಸ್ಕೃತಿ, ಅರ್ಥಶಾಸ್ತ್ರ, ಅಭಿವೃದ್ಧಿ ಇವೇ ಭಾರತದ ಉಸಿರಾದವು. ಇದರ ಪರಿಣಾಮವೇ ದೇಶದ ತುಂಬ ತಾಂಡವವಾಡುತ್ತಿರುವ ಅನೀತಿ.

ಈಗ ನಮ್ಮ ಮುಂದೆ ಇರುವ ಪ್ರಶ್ನೆ ಅನೀತಿಯತ್ತ ಹೋಗುತ್ತಿರುವ ಸಮಾಜದ ಈ ನೀತಿಯ ಬಗ್ಗೆ ತೀರ್ಪು ಕೊಡುವವರು ಯಾರೆಂಬುದು. ನೀತಿ–ಅನೀತಿಯ ಬಗ್ಗೆ ನ್ಯಾಯಾಲಯವು ಕೊಡುವ ತೀರ್ಪು ವಿವಾದಕ್ಕೂ, ಗೊಂದಲಕ್ಕೂ, ಗಲಭೆಗೂ ಕಾರಣವಾಗುತ್ತದೆ. ಯಾವುದಾದರೊಂದು ಸಂಘಟನೆ, ಧರ್ಮಪೀಠ, ಧರ್ಮಾಧೀಶ ತೀರ್ಪುಕೊಟ್ಟರೆ ಅದು ಕೂಡ ವಿವಾದಕ್ಕೂ, ಗೊಂದಲಕ್ಕೂ, ಗಲಭೆಗೂ

ಕಾರಣವಾಗುತ್ತದೆ. ಒಂದರ್ಥದಲ್ಲಿ ನೀತಿ-ಅನೀತಿಯ ವಿಷಯದಲ್ಲಿ ಜಾಗತಿಕ ಮಟ್ಟದಲ್ಲಿಯೇ ಅರಾಜಕತೆಯುಂಟಾಗಿದೆ. ಹುಚ್ಚರ ನಾಡಿನಲ್ಲಿ ಹುಚ್ಚರದೇ ರಾಜ್ಯಭಾರ ಎನ್ನುವಂತಾಗಿದೆ. ಪ್ರಜಾತಂತ್ರ, ಸಂವಿಧಾನ, ವ್ಯವಸ್ಥೆ ಇವೆಲ್ಲವೂ ಶಕ್ತಿಹೀನವಾಗಿವೆ. ಉಪ್ಪೇ ತನ್ನ ರುಚಿಯನ್ನು ಕಳೆದುಕೊಂಡರೆ ಉಪ್ಪಿಗೆ ರುಚಿ ತಂದುಕೊಡುವವರು ಯಾರು ಎಂಬಂತಾಗಿದೆ ನಮ್ಮ ಪ್ರಜಾತಂತ್ರದ ಸ್ಥಿತಿ.

ಅನೀತಿಯ ಮೂರನೆಯ ಉದಾಹರಣೆ ಹಿಂಸೆ. ಸ್ವಾತಂತ್ರ್ಯಕ್ಕೆ ಮೊದಲು ಹಿಂಸೆ ಖಂಡನಾರ್ಹ ಕ್ರಿಯೆಯೆಂದು ಸಮಾಜ ಭಾವಿಸಿತ್ತು. ಹಿಂಸಾ ಕೃತ್ಯಗಳಿಗೆ ಪ್ರೋತ್ಸಾಹಿಸುವುದು ಪಾಪವೆಂದು ಭಾವಿಸಿತ್ತು. ಆದರೆ ಸ್ವಾತಂತ್ರ್ಯ ಬಂದ ಮೇಲೆ ಮತ್ತು ಜಾಗತಿಕರಣದ ಪ್ರಕ್ರಿಯೆ ಪ್ರಾರಂಭವಾದ ಮೇಲೆ ಹಿಂಸೆ ಸಮಾಜ ಜೀವನದ ಅವಿಭಾಜ್ಯ ಅಂಗವಾಗಿ ಬಿಟ್ಟಿತು. ಹಿಂಸೆಯನ್ನು ತಡೆಗಟ್ಟುವುದು ಸಾಧ್ಯವಿಲ್ಲವೆಂಬ ಹಂತಕ್ಕೆ ಅದು ಬಂದು ಮುಟ್ಟಿದೆ. ಹಿಂಸೆಯ ಇನ್ನೊಂದು ಮುಖವಾದ ಭಯೋತ್ಪಾದನೆ ಜಾಗತಿಕ ಸಮಸ್ಯೆಯೆಂದೇ ಪರಿಭಾವಿಸಲಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರು ಹಿಂಸೆಯನ್ನು ಖಂಡಿಸಿ ಅಹಿಂಸೆಯನ್ನು ಪ್ರಚುರಗೊಳಿಸಿದರು. ಅಹಿಂಸೆ ಸಾರ್ವಜನಿಕ ಜೀವನದ ವ್ರತವಾಗಬೇಕೆಂದು ಪ್ರಯತ್ನಿಸಿದರು. ಅದರ ಫಲವಾಗಿ ಅಹಿಂಸೆಯ ಮೂಲಕವೇ ಭಾರತ ಸ್ವಾತಂತ್ರ್ಯ ಪಡೆಯಿತೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಆದರೆ ಕ್ರಮೇಣ ಹಿಂಸೆಗೂ, ರಾಜಕಾರಣಕ್ಕೂ ಅನೈತಿಕ ಸಂಬಂಧವೇರ್ಪಟ್ಟು ಇಂದು ಹಿಂಸಾಚಾರವೇ ಜನರ ಉಸಿರಾಟವಾಗಿಬಿಟ್ಟಿದೆ. ಇದು ಸಾಲದೆಂಬಂತೆ ಹಿಂಸೆಗೂ, ಧರ್ಮಕ್ಕೂ ಕೂಡ ಅನೈತಿಕ ಸಂಬಂಧವೇರ್ಪಟ್ಟು ಹಿಂಸಾಜ್ವಾಲೆಗೆ ತುಪ್ಪವನ್ನು ಸುರಿದಂತಾಗಿದೆ.

ಹೀಗೆ ಹಲವಾರು ದಿಸೆಗಳಲ್ಲಿ ಅನೀತಿಯು ದೇಶವನ್ನು ಸುತ್ತುವರಿದಾಗ ಈ ಸಮಸ್ಯೆಯಿಂದ ಬಿಡುಗಡೆ ಮಾಡುವವರು ಯಾರು ಮತ್ತು ಯಾವುದು ನೀತಿ, ಯಾವುದು ಅನೀತಿ ಎಂದ ತೀರ್ಪು ಕೊಡುವವರು ಯಾರು ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಿದೆ.

ಪ್ರಜಾತಂತ್ರ ವ್ಯವಸ್ಥೆಯೇ ಬೇರೆಲ್ಲ ರಾಜ್ಯ ವ್ಯವಸ್ಥೆಗಳಿಗಿಂತ ಉತ್ತಮ ಮತ್ತು ಅನಿವಾರ್ಯವೆಂದು ಒಪ್ಪಿಕೊಳ್ಳಲಾಗಿದೆಯಾದ್ದರಿಂದ ನೀತಿ-ಅನೀತಿಯ ಸಮಸ್ಯೆಯನ್ನು ಪ್ರಜಾತಂತ್ರ ವ್ಯವಸ್ಥೆಯ ಮೂಲಕವೇ ಬಗೆಹರಿಸಿಕೊಳ್ಳಬೇಕು. ಆದರೆ ಇಂದಿರುವ ಪ್ರಜಾತಂತ್ರ ವ್ಯವಸ್ಥೆಯಲ್ಲಿಯ ಲೋಪದೋಷಗಳನ್ನು ನಿವಾರಿಸಿಕೊಳ್ಳುವುದು ಅನಿವಾರ್ಯ. ಈ ನಿಟ್ಟಿನಲ್ಲಿ ಸತತ ಪ್ರಜಾತಂತ್ರ ನಿಷ್ಠಾತ್ಮಕ ಪ್ರಯತ್ನ ನಡೆಯಬೇಕು. ಈ ಪ್ರಯತ್ನದಲ್ಲಿ ಮುಖ್ಯವಾದುದು ಇಂದಿನ ಸರ್ಕಾರಿ ಶಕ್ತಿ, ದಂಡ ಶಕ್ತಿ, ಆಡಳಿತ ಶಕ್ತಿ, ಪಕ್ಷಗಳ ಶಕ್ತಿಯ ಮೇಲೆ ಲೋಕಶಕ್ತಿಯ ಹಿಡಿತ ಸಾಧಿತವಾಗಬೇಕು ಎಂಬುದು ಮುಖ್ಯವಾದುದು. ವಿಜ್ಞಾನ ಮತ್ತು ತಂತ್ರಜ್ಞಾನದ ಮೇಲೂ ಲೋಕಶಕ್ತಿಯ ನಿಯಂತ್ರಣ ಸಾಧ್ಯವಾಗಬೇಕು. ಇಂಥ ಲೋಕಶಕ್ತಿಯ ನಿರ್ಮಾಣವಾದಾಗ ಲೋಕಹಿತಕ್ಕೆ ಯಾವುದು ಹಿತಕಾರಿ, ಯಾವುದು ಅಹಿತಕಾರಿ, ಯಾವುದು ನೀತಿಯುತ, ಯಾವುದು ಅನೀತಿಯುತ ಎಂಬುದನ್ನು ಸಮಾಜವೇ ತೀರ್ಮಾನಿಸುವುದು. ಅಂಥ ಸಮಾಜದ ನಿರ್ಮಾಣಕ್ಕೆ ಕೆಲಸಮಾಡುವುದು ಪ್ರತಿಯೋರ್ವ ಪ್ರಜಾತಂತ್ರ ಪ್ರೇಮಿಯ ಕರ್ತವ್ಯ. * * *

ಸುವರ್ಣ ಕನ್ನಡದ ಆತಂಕದ ಹಾಡುಗಳು

- ಅಕ್ಷರ.ಕೆ.ವಿ

ಈಚೆಗಷ್ಟೇ ನಾವು ಕರ್ನಾಟಕದ ಸುವರ್ಣೋತ್ಸವವನ್ನು ಆಚರಿಸಿದ್ದೇವೆ. ಆ ಸುವರ್ಣೋತ್ಸವವು ನಮಗೆಲ್ಲರಿಗೂ ಗೊತ್ತಿರುವ ಹಾಗೆ ಕನ್ನಡ ಅನ್ನುವ 'ಭಾಷೆ'ಯ ಐವತ್ತು ವರ್ಷಗಳ ಆಚರಣೆಯಲ್ಲ; ಕನ್ನಡ ಎಂಬ ರಾಷ್ಟ್ರದ ಸುವರ್ಣಮಹೋತ್ಸವ ಅದು. ಆದ್ದರಿಂದ, ಈ ಸುವರ್ಣೋತ್ಸವದ ನೆಪದಲ್ಲಾದರೂ ನಾವು ಕನ್ನಡ ರಾಷ್ಟ್ರವನ್ನು ಕಟ್ಟುವ ಐದು ದಶಕಗಳ ಪ್ರಕ್ರಿಯೆಯಲ್ಲಿ ಯಾವೆಲ್ಲ ಬಗೆಯ ಸವಾಲು-ಸಮಸ್ಯೆಗಳು ಎದುರಾದವು ಅನ್ನುವುದನ್ನು ಪರಿಶೀಲಿಸುವುದಗತ್ಯ. ಮತ್ತು ಅಂಥ ಪರಿಶೀಲನೆಯ ಒಂದು ಮುಖ್ಯ ದಾಖಲೆಯಾಗಿ, ನಮ್ಮ ಕವಿಗಳು ಕನ್ನಡ ರಾಷ್ಟ್ರಕಲ್ಪನೆಯನ್ನು ಹೇಗೆ ತಮ್ಮ ಕಾವ್ಯದೊಳಕ್ಕೇ ಒಳಗೊಂಡಿಸಿಕೊಂಡಿದ್ದಾರೆ ಅನ್ನುವ ಬಗ್ಗೆ ಕೂಡ ಇವತ್ತು ನಾವು ಸೂಕ್ಷ್ಮವಾಗಿ ಗಮನ ಹರಿಸುವ ತುರ್ತು ಇದೆ ಎಂದು ನನಗನ್ನಿಸಿದೆ. ಅದಕ್ಕಾಗಿಯೇ ಈ ಪ್ರಬಂಧಕ್ಕೆ ನಾನು 'ಸುವರ್ಣ ಕನ್ನಡದ ಆತಂಕದ ಹಾಡುಗಳು' ಅನ್ನುವ ತಲೆಬರಹವನ್ನಿಟ್ಟುಕೊಂಡಿದ್ದೇನೆ; ಮತ್ತು , ಕನ್ನಡ ಕವಿಗಳು ತಮ್ಮ ಕಾವ್ಯದ ಒಳಗೇ ಕನ್ನಡದ ರಾಷ್ಟ್ರವನ್ನು ಕಂಡಿರುವ ವಿಭಿನ್ನ ರೀತಿಗಳನ್ನು ಮತ್ತು ಅಂಥ ಕೆಲವು ಉದಾಹರಣೆಗಳ ಒಳಗೇ ಅಡಕವಾಗಿರುವ ಆತಂಕಗಳನ್ನು ಪರಿಶೀಲಿಸುವ ಪುಟ್ಟದೊಂದು ಪ್ರಯತ್ನವನ್ನಿಲ್ಲಿ ಮಾಡುವವನಿದ್ದೇನೆ.

ಈ ಪ್ರಯತ್ನದ ಹಿಂದೆ ಇನ್ನೊಂದು ವೈಯಕ್ತಿಕ ಒತ್ತಡವೂ ಕೆಲಸ ಮಾಡಿರುವುದನ್ನು ನಾನಿಲ್ಲಿ ಉಲ್ಲೇಖಿಸಬೇಕು. ಕೆಲ ವರ್ಷಗಳ ಹಿಂದೆ ನಾನು, ನಮ್ಮದೊಂದು ನಾಟಕದಲ್ಲಿ ಬಳಸಲಿಕ್ಕೆಂದು ಕನ್ನಡದ ಬಗ್ಗೆ ಬಂದ ಹಾಡುಗಳನ್ನು ಹುಡುಕುತ್ತಿದ್ದೆ. ಅದಕ್ಕಾಗಿ ಹಲವಾರು ಸಂಕಲಗಳನ್ನು ತಿರುವುತ್ತಾ ಹೋದಾಗ, ಒಂದು ಅತೃಪ್ತಿ ನನ್ನೊಳಗೆ ಹುಟ್ಟಲಾರಂಭಿಸಿತು; ಕನ್ನಡದ ಬಗ್ಗೆ ಇರುವ ಇಂಥ ಅನೇಕ ಹಾಡುಗಳು ಜನಪ್ರಿಯ ಮಾತಿನಲ್ಲಿ ದೇಶಭಕ್ತಿಗೀತೆಗಳು ಕಾವ್ಯವಾಗಿ ಬಹಳ ದುರ್ಬಲ ಅನ್ನುವ ಅನ್ನಿಸಿಕೆ ನನ್ನೊಳಗೆ ಮೂಡತೊಡಗಿತು. ಇದಕ್ಕೆ ಕಾರಣ ಏನು? ಕನ್ನಡದಲ್ಲಿ ಎಷ್ಟೆಲ್ಲ ಸಮರ್ಥ ಕಾವ್ಯವಿದೆ; ಎಂಥೆಂಥ ಗಟ್ಟಿ ಕವಿಗಳಿದ್ದಾರೆ; ಆದರೆ, ಕನ್ನಡದ ಬಗ್ಗೆಯೇ ಕನ್ನಡದಲ್ಲಿ ಕಾವ್ಯ ಬರೆಯುವಾಗ ಯಾಕೆ ಇಂಥ ದುರ್ಬಲತೆ ಹುಟ್ಟುತ್ತದೆ? ಯಾಕೆ ಒಳ್ಳೆಯ ಪದ್ಯಗಳನ್ನೂ ಬರೆದ ಕವಿಗಳೇ ಇಂಥ ದೇಶಭಕ್ತಿಗೀತೆಗಳನ್ನು ಬರೆಯುವಾಗ ದುರ್ಬಲ ಕವಿಗಳಾಗಿ ಕಾಣುತ್ತಾರೆ? ಯಾಕೆ ಇಂಥ ಕಾವ್ಯದಲ್ಲಿ ಬಹುಪಾಲು ಆಲಂಕಾರಿಕ ಭಾಷಾಪ್ರಯೋಗವೂ ಕೃತಕ ನುಡಿಗಟ್ಟುಗಳೂ ನಿರ್ಮಾಣ ಆಗುತ್ತವೆ? ಯಾಕೆ ಇಂಥ ಕವನಗಳು ಗಾಢ ಚಿಂತನೆಗಳಾಗುವ ಬದಲು ಸರಳ ಉದ್ಘೋಷಗಳಾಗುತ್ತವೆ? ಇತ್ಯಾದಿ ಪ್ರಶ್ನೆಗಳು ಆಗ ನನ್ನೆದುರಿಗೆ ಬಂದವು. ಆಗ ನನಗನ್ನಿಸಿದ ಸಂಗತಿ ಇದು ಪ್ರಾಯಶಃ ಈ ಸಮಸ್ಯೆ 'ಕಾವ್ಯ'ಕ್ಕೆ ಸೀಮಿತವಲ್ಲ, ಅದು ಮೂಲತಃ 'ರಾಷ್ಟ್ರ'ದ ಪರಿಕಲ್ಪನೆಯಲ್ಲಿಯೇ ಇದೆ. ಇಂಥ ಅನ್ನಿಸಿಕೆಯನ್ನು ಆಧಾರವಾಗಿಟ್ಟುಕೊಂಡೇ ನಾನೀಗ ಕನ್ನಡ ಕಾವ್ಯ-ರಾಷ್ಟ್ರಗಳ ಸಂಯುಕ್ತ ಕೃತಿಯೊಳಗೆ

ಉದ್ಭವಿಸುವ ಕೆಲವು ಸಮಸ್ಯೆಗಳ ಪ್ರಸ್ತಾಪ ಮಾಡುತ್ತೇನೆ.

ಇಂಥ ಪ್ರಸ್ತಾಪಕ್ಕೆ ತುಂಬ ಉಪಯುಕ್ತವಾಗುವಂಥ ಒಂದು ತೋರುಬೆರಳನ್ನು ಡಿ.ಆರ್.ನಾಗರಾಜ್ ಅವರು ತಮ್ಮ ಒಂದು ಪ್ರಸಿದ್ಧ ಲೇಖನದಲ್ಲಿ ಈಗಾಗಲೇ ತೋರಿಸಿದ್ದಾರೆ. ಕನ್ನಡದಲ್ಲಿ ಎರಡು ಬಗೆಯ ರಾಷ್ಟ್ರೀಯತೆಗಳು ಕೆಲಸ ಮಾಡಿವೆ ಎಂದು ಈ ಲೇಖನದಲ್ಲಿ ಡಿ.ಆರ್. ಗುರುತಿಸಿ ಅವನ್ನು 'ಆತಂಕ ಕೇಂದ್ರಿತ ರಾಷ್ಟ್ರೀಯತೆ' ಮತ್ತು 'ಆಧ್ಯಾತ್ಮಿಕ ರಾಷ್ಟ್ರೀಯತೆ' ಎಂದು ಹೆಸರಿಸಿದ್ದಾರೆ. ಮುಂದೆ ಈ ಲೇಖನವು ಕನ್ನಡದ ವಿಭಿನ್ನ ಸನ್ನಿವೇಶ – ಸಂದರ್ಭಗಳಲ್ಲಿ ಎಲ್ಲೆಲ್ಲಿ 'ಆತಂಕಕೇಂದ್ರಿತ ರಾಷ್ಟ್ರೀಯತೆ' ಉದ್ಭವಿಸಿದೆಯೋ ಅಲ್ಲೆಲ್ಲ ಸಮಸ್ಯೆಗಳೂ ಹುಟ್ಟಿರುವುದನ್ನು ಕುರಿತು ಚರ್ಚೆ ನಡೆಸುತ್ತದೆ. ಡಿ.ಆರ್.ನಾಗರಾಜ್ ಅವರ ಈ ಪ್ರಸ್ತಾಪವನ್ನು ನಾನು ಇಲ್ಲಿ, ಕನ್ನಡದ ದೇಶಗೀತೆಗಳನ್ನು ಕುರಿತು, ಎರಡು ರೀತಿಗಳಲ್ಲಿ ಅನ್ವಯಿಸಲು ಹೊರಟಿದ್ದೇನೆ. ಮೊದಲನೆಯದಾಗಿ, ಕನ್ನಡದ ಇಂಥ ಗೀತೆಗಳ ಶೇಕಡಾ ತೊಂಭತ್ತೊಂಭತ್ತು ಪಾಲು ಇಂಥ ಆತಂಕಕೇಂದ್ರಿತ ರಾಷ್ಟ್ರೀಯತೆಯ ವೈವಿಧ್ಯತೆಗಳನ್ನೇ ನಾನಾ ರೀತಿಯಲ್ಲಿ ಆವಿಷ್ಕರಿಸಿದೆ ಎನ್ನುವುದನ್ನು ಗಮನಿಸುವುದು; ಮತ್ತು ಎರಡನೆಯದಾಗಿ, ಅಪರೂಪಕ್ಕೆ ಅಂಥ ಕೆಲವು ಕವಿತೆಗಳಲ್ಲಿ ಇಂಥ ಆತಂಕಕೇಂದ್ರಿತ ಆಕೃತಿಯ ಒಡಲಿನಿಂದಲೇ ವಿಚಿತ್ರವಾದ ವ್ಯಂಗ್ಯವೂ, ತನ್ನನ್ನೇ ತಾನು ಸಮಸ್ಯಾತ್ಮಕಗೊಳಿಸಿಕೊಳ್ಳುವ ಒಳಸುಳಿಗಳೂ ಹೊರ ಹೊಮ್ಮುವುದನ್ನು ಗುರುತಿಸಿ ತೋರಿಸುವುದು. ಹಾಗೆ ಮಾಡುವ ಹಾದಿಯಲ್ಲಿ ಈ ಪ್ರಬಂಧವು ರಾಷ್ಟ್ರೀಯತೆಯ ಆತಂಕಗಳನ್ನು ಮೂರು ಬಗೆಯದಾಗಿ ವರ್ಗೀಕರಿಸಿ ಗಮನಿಸುತ್ತದೆ; ಮತ್ತು ಪ್ರತಿಯೊಂದರಲ್ಲೂ ಆಯ್ದ ಉದಾಹರಣೆಗಳ ಮೂಲಕ ಮೇಲಿನ ಎರಡು ಬಗೆಯ ಪ್ರಕ್ರಿಯೆಗಳನ್ನು ಗುರುತಿಸಲು ಯತ್ನಿಸುತ್ತದೆ.

ರಾಷ್ಟ್ರೀಯ ಪ್ರಜ್ಞೆಯಿಂದ ಉದ್ಭವಿಸುವ ವಿಭಿನ್ನ ಬಗೆಯ ಆತಂಕಗಳಲ್ಲಿ ಮೊದಲನೆಯದಾಗಿ ನಾನು ಗುರುತಿಸುವುದು, ಅನಿವಾಸಿ ಆತಂಕ ಅಥವಾ ಪರದೇಶಿ ಆತಂಕ(ಆ್ಯಂಗ್‌ಸೈಟಿ ಆಫ್ ದಿ ಎಕ್ಸೈಲ್)ಎಂದು ಕರೆಯಬಹುದಾದ್ದು.ಪರದೇಶಿ ಆತಂಕದ ಮುಖ್ಯವಾದ ಲಕ್ಷಣ ಏನು ಎಂದರೆ, ಇಲ್ಲಿ ನನಗೆ ದೇಶ ಇಲ್ಲ ಎನ್ನುವ ಒಂದು ಆತಂಕದಿಂದಲೇ ದೇಶಭಕ್ತಿ ಎನ್ನುವ ವಸ್ತು ಉತ್ಪನ್ನಗೊಳ್ಳುತ್ತದೆ; ತಾನು ಮೂಲನೆಲೆಯನ್ನು ಕಳೆದುಕೊಂಡಿದ್ದೇನೆ ಎಂದು ಅನ್ನಿಸುವುದರ ಜೊತೆಗೇ ಇಂಥದು ತನ್ನ ಮೂಲನೆಲೆ ಎಂಬ ಅರಿವು ಜಾಗೃತಗೊಳ್ಳುತ್ತದೆ. ಪ್ರಸಿದ್ಧ ಕವಿ ರೈನರ್ ಮರಿಯಾ ರಿಲ್ಕ್ ಒಂದು ಕಡೆಗೆ, ಇಂಥದೇ ಒಂದು ಮಾತು ಹೇಳುತ್ತಾನೆ.ಹೋಮ್‌ಲ್ಯಾಂಡ್ ಎನ್ನುವುದು ನಿರ್ಮಾಣಗೊಳ್ಳುವುದೇ ನಾವು ಎಕ್ಸೈಲ್‌ನಲ್ಲಿದ್ದಾಗ ಅಂದರೆ, ದೇಶಪ್ರಜ್ಞೆಗೆ ಮೂಲ ದೇಶಭೃಷ್ಟತೆ ಎಂಬುದಾಗಿ. ಮೇಲ್ನೋಟಕ್ಕೆ ವಿರೋಧಾಭಾಸ ಎಂದು ಕಾಣಬಹುದಾದ ಈ ಮಾತು ನಮ್ಮ ನಿಮ್ಮ ಅನುಭವಕ್ಕೂ ಬರುವ ಸರಳವಾದ ಸತ್ಯವೂ ಹೌದು. ಉದಾಹರಣೆಗೆ, ನಾವು ಎಲ್ಲಿಯತನಕ ನಮ್ಮ ಊರಿನಲ್ಲಿಯೇ ಇರುತ್ತೇವೆಯೋ ಅಲ್ಲಿಯವರೆಗೂ ಆ ಊರನ್ನು 'ನಮ್ಮ ಊರು' ಎಂದು ನಾವು ಯಾರೂ ಕರೆಯಲು ಹೋಗುವುದಿಲ್ಲ. ಅದು 'ಊರು' ಅಷ್ಟೇ. ಅದೇ, ನಾವು ಆ ಊರು ಬಿಟ್ಟು ಬೇರೆ ಊರಿಗೆ ಹೋಗುತ್ತಿದ್ದಂತೆ, ಮೊದಲಿನದು 'ನಮ್ಮ ಊರು' ಅಂತ ಅನ್ನಿಸುವುದಕ್ಕೆ ಆರಂಭವಾಗುತ್ತದೆ. ಅರ್ಥಾತ್, ಸ್ವದೇಶ ಅನ್ನುವುದು ನಿರ್ಮಾಣ ಆಗುವುದೇ ನಾವು

ಪರದೇಶಿ ಆದಾಗ. ಆದರೆ, ಇಂಥ ಪರದೇಶಗಮನವೆನ್ನುವುದು ಭೌತಿಕವಾಗಿಯೇ ನಡೆಯಬೇಕಾಗಿಲ್ಲ ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಮಾನಸಿಕವಾಗಿ ನಾವು 'ಪರದೇಶಿ'ಗಳಾದಾಗಲೂ ನಮ್ಮ 'ಸ್ವದೇಶಪ್ರೇಮ' ವಿಶೇಷವಾಗಿ ಜಾಗೃತಗೊಳ್ಳಲು ಆರಂಭವಾಗುತ್ತದೆ.

೧೯ನೆಯ ಶತಮಾನದ ತುದಿಯ ಕಾಲಘಟ್ಟದಲ್ಲಿ ಕನ್ನಡ ನಾಡು ಮತ್ತು ಕಾವ್ಯಗಳೆರಡರಲ್ಲೂ ಆಗಿದ್ದೂ ಹಾಗೆ. ಅದಕ್ಕೆ ಒಂದು ಪ್ರಖರವಾದ ಉದಾಹರಣೆಯಾಗಿ ನನಗೆ ಶಾಂತಕವಿಗಳ ಒಂದು ಪದ್ಯ ನೆನಪಿಗೆ ಬರುತ್ತದೆ. ನಮಗೆಲ್ಲ ಗೊತ್ತಿರುವಂತೆ, ಸಕ್ಕರಿ ಬಾಳಾಚಾರ್ಯ ಎಂಬ ಹೆಸರಿನ ಈ ಶಾಂತಕವಿಗಳು ಗದುಗಿನಲ್ಲಿ ಕನ್ನಡದ ಮೊದಲ ನಾಟಕ ಕಂಪನಿಯನ್ನು ಕಟ್ಟಿದವರು.ಆ ಕಾಲದಲ್ಲಿ ಅವರು ಕನ್ನಡ ರಂಗಭೂಮಿಯ ಆರಂಭದ ಸ್ಥಿತಿ ಕುರಿತು ಬರೆದ ಒಂದು ಪದ್ಯದಲ್ಲಿ ಅಂಥ ಒಂದು ಆತಂಕ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ:

ಎಲ್ಲಿ ನೋಡಲು ಮರಾಠಿಯರ ನಾಟಕದಾಟ।
ಎಲ್ಲಿ ನೋಡಲು ಮರಾಠಿಯರ ನಾಟಕದೂಟ।
ಎಲ್ಲಿ ನೋಡಲು ಮರಾಠಿಯರ ನಾಟಕಮಯಂ ತಾನಾಯ್ತು ಕರ್ಣಾಟಕಂ॥
ಎಲ್ಲಿ ನೋಡಲು ಕನ್ನಡದ ಭಾಷೆ ಮಟ್ಟೆಯದ
ರಲಿಲ್ಲ, ಮೃದು ಶಬ್ದವಿಲ್ಲ.....ಇಲ್ಲವೆಂದೇ ಧಾರವಾಡದ ಸೀಮೆಯ ಜನಂ
ಸೊಲ್ಲಿಸುವ ಕಾಲದಲಿ ಕರ್ಣಾಟಕಂ ಪುಟ್ಟಿದುದು ಕೃತಪುರದೊಳು॥

ಅಂದರೆ, ಈ ಪದ್ಯವೇ ಸೂಚಿಸುವ ಹಾಗೆ, ಕರ್ಣಾಟಕ ಅನ್ನುವುದು ಹುಟ್ಟುವುದಕ್ಕೆ ಪ್ರೇರಕವಾಗಿ ನಮಗೊಂದು ಮರಾಠಿ ಆಕ್ರಮಣದ ಆತಂಕ ಬೇಕು; ಇಲ್ಲದೆ ಹೋದರೆ ಕರ್ನಾಟಕ ಅನ್ನುವುದು ಹುಟ್ಟುವುದಿಲ್ಲ. ಅಥವಾ ಇದನ್ನೇ ಸಾಧಾರಣಗೊಳಿಸಿ ಹೇಳುವುದಾದರೆ, ನಮಗೊಂದು 'ಅನ್ಯ' ಇಲ್ಲದೆ ಹೋದರೆ, ಒಂದು 'ಸ್ವ' ದ ಉದ್ಭವ ಕೂಡ ಸಾಧ್ಯವೇ ಇಲ್ಲದೆ ಇರುವಂಥ ಒಂದು ವಿಚಿತ್ರವಾದ ಸ್ಥಿತಿ ಇದು. ಕವಿ ಬೇಂದ್ರೆಯವರ ಒಂದು ಬಹಳ ಪ್ರಸಿದ್ಧ ಪದ್ಯದೊಳಗೂ ಇಂಥದೇ ಒಂದು ಉಲ್ಲೇಖ ಬರುತ್ತದೆ. 'ಕಣಸಿನೊಳಗೆ ಕಣಸು'ಎಂಬ ಹೆಸರಿನ ಆ ಪದ್ಯ, ಕನ್ನಡ ಮಾತೆ ಮತ್ತು ಕನಸು ಕಾಣುತ್ತಾ ಇರುವ ನಿರೂಪಕ ಇವರಿಬ್ಬರ ನಡುವಿನ ನಾಟಕೀಯವಾದ ಒಂದು ಸಂಭಾಷಣೆಯ ರೂಪದಲ್ಲಿ ನಿರೂಪಿತವಾಗಿದೆ. ಆ ಪದ್ಯದಲ್ಲಿ ಒಂದು ಕಡೆಗೆ ಆ ನಿರೂಪಕ ತಾಯಿಯನ್ನು ಕೇಳುತ್ತಾನೆ. 'ಮನೆಯಿಲ್ಲವೇ ಇರಲು, ಪರದೇಶಿಯೇನು?' ಆಗ, ಅವಳು ಉತ್ತರ ಹೇಳುತ್ತಾಳೆ. 'ಮನೆಯೇ ಮುನಿದೆದ್ದಿರಲು ಯಾ ದೇಶವೇನು?' ಅರ್ಥಾತ್, ತನ್ನ ಮನೆಯೇ ತನ್ನ ಮೇಲೆ ಮುನಿಸಿಕೊಂಡಾಗ ಮನೆಯಲ್ಲಿಯೇ ಪರದೇಶಿ ತಾನು–ಅನ್ನುವುದು ಆಕೆಯ ಭಾವ. ಅನಿವಾಸಿ ಆತಂಕ ಎನ್ನುವ ನುಡಿಗಟ್ಟಿನಲ್ಲಿ ನಾನು ಗುರುತಿಸುವುದಕ್ಕೆ ಪ್ರಯತ್ನಿಸುತ್ತಿರುವ ಭಾವ ಕೂಡ ಇದೇ.

ಈ ಅನಿವಾಸಿ ಆತಂಕ ಎಂಬ ಪರಿಕಲ್ಪನೆಗೆ, ವಿಶೇಷವಾಗಿ ೧೯೯೦ರ ದಶಕದ ಈಚೆಗೆ, ಹೊಸ ಬಗೆಯ ಸಾಂದರ್ಭಿಕ ಅರ್ಥವೊಂದು ಒದಗಿ ಬರುತ್ತಿದೆ. ಜಾಗತೀಕರಣ ಎಂದು ಕರೆಯಲಾಗುವ ವಿಶಾಲ ಪ್ರಕ್ರಿಯೆಯ ಭಾಗವಾಗಿ ಸಂಭವಿಸುತ್ತಿರುವ ಈ

ಹೊಸ ಅನಿವಾಸಿ ಆತಂಕವು, ಈಚೆಗೆ ಸೃಷ್ಟಿಸುತ್ತಿರುವ ಅಪಾಯಗಳ ಒಂದು ದೊಡ್ಡ ಪಟ್ಟಿಯನ್ನೇ ನಾವು ಮಾಡಬಹುದು. ಒಂದು ತುದಿಯಲ್ಲಿ ಈ ಆತಂಕವು ಅಮೇರಿಕಾದಲ್ಲಿ ಅಥವಾ ಕೆನಡಾದಲ್ಲಿ ಇದ್ದು ಕಾಲಕಾಲಕ್ಕೆ ವಿಶ್ವ ಹಿಂದೂ ಪರಿಷತ್‌ಗೆ ಕಾಣಿಕೆಯನ್ನು ಸಲ್ಲಿಸುವ ಎನ್.ಆರ್.ಐ.ಗಳಿಂದ ಪ್ರಾರಂಭವಾಗುತ್ತದೆ; ಇನ್ನೊಂದು ತುದಿಗೆ, ಈಚೆಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಗಿರೀಶ್ ಕಾರ್ನಾಡರ 'ಹುಸಿ ಕನ್ನಡಾಭಿಮಾನದ' ಬಗ್ಗೆ ತುಂಬ ಉಗ್ರಗಾಮಿ ಸಿಟ್ಟಿನಿಂದ ಬರೆದಿರುವ ಕೆ.ವಿ.ತಿರುಮಲೇಶ್ ಅವರ ಒಂದು ಲೇಖನದಲ್ಲಿಯು ಇಂಥದೇ ಒಂದು ಅನಿವಾಸಿ ಆತಂಕದ ಛಾಯೆ ಇರಬಹುದೇ ಎಂಬ ಗುಮಾನಿ ನನಗೆ ಹುಟ್ಟಿದೆ.

ಕೆಲವು ದಿನಗಳ ಹಿಂದೆ ನಮ್ಮೂರಿನಲ್ಲಿಯೇ ನಡೆದ ಒಂದು ಘಟನೆ ನನಗಿಲ್ಲಿ ನೆನಪಿಗೆ ಬರುತ್ತಿದೆ. ಮಿತ್ರರಾದ ಜಿ.ರಾಜಶೇಖರ್ ಅವರು ಅವತ್ತು ನಮ್ಮೂರಿನ ಒಂದು ಗೋಷ್ಠಿಯಲ್ಲಿ ಭಾಷಣ ಮಾಡಿದ ಸಂದರ್ಭ ಅದು; ಸಾಹಿತ್ಯದ ಸಭೆಗಳನ್ನು ದೇವಸ್ಥಾನಗಳಲ್ಲಿ ಮಾಡುವುದು ಸರಿಯೋ ತಪ್ಪೋ ಎನ್ನುವ ವಿಷಯ ಇಟ್ಟುಕೊಂಡು ಅವರು ಅವತ್ತು ಮಾತಾಡುತ್ತಾ ಇದ್ದರು. ಆ ಸಭೆಗೆ ಹಲವು ವರ್ಷಗಳಿಂದ ಅಮೇರಿಕಾದಲ್ಲಿ ನೆಲೆಸಿರುವ ನಮ್ಮೂರಿನ ಸ್ನೇಹಿತರೊಬ್ಬರು ಕೂಡ ಬಂದಿದ್ದರು. ರಾಜಶೇಖರ್ ಅವರ ಭಾಷಣ ಮುಗಿಯುತ್ತಿದ್ದ ಹಾಗೆ, ಇದ್ದಕ್ಕಿದ್ದ ಹಾಗೆ, ಆ ಸ್ನೇಹಿತರು ಎದ್ದು ನಿಂತು, ಅದುವರೆಗೂ ರಾಜಶೇಖರ್ ಆಡಿದ ಮಾತಿಗೆ ಏನೇನೂ ಸಂಬಂಧ ಇಲ್ಲದ ಒಂದು ಪ್ರಶ್ನೆ ಕೇಳಿಬಿಟ್ಟರು– 'ಅಲ್ಲ, ಈಗ ಕನ್ನಡನಾಡಿನಲ್ಲಿ ಕನ್ನಡವೇ ಸಂಪೂರ್ಣ ಹೊರಟು ಹೋಗ್ತಾ ಇದೆಯಲ್ಲ, ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?' ಆಮೇಲೆ, ಈ ಪ್ರಶ್ನೆಗೆ ರಾಜಶೇಖರ್ ಅವರು ಯಾವುದೋ ರೀತಿಯಲ್ಲಿ ಉತ್ತರ ಕೊಟ್ಟರು, ಆ ಮಾತು ಬೇರೆ; ಆದರೆ, ನನಗೆ ವಿಶೇಷವಾಗಿ ಕಂಡದ್ದು ಸಂದರ್ಭವೇ ಇಲ್ಲದೆ ಹುಟ್ಟಿದ ಆ ಪ್ರಶ್ನೆಯೇ. ನನ್ನ ಪ್ರಕಾರ, ಈ ಘಟನೆಯು ಅನಿವಾಸಿ ಆತಂಕದ ಒಂದು ಮುಖ್ಯ ಲಕ್ಷಣವನ್ನು ಸೂಚಿಸುವಂತಿದೆ. ಅದೇನೆಂದರೆ, ಈ ಅನಿವಾಸಿ ಆತಂಕ ಅನ್ನುವುದು ಹುಟ್ಟುವುದೇ ಬಹುತೇಕ ಇಂಥ 'ಸಂದರ್ಭವಲ್ಲದ ಸಂದರ್ಭ'ಗಳಲ್ಲೇ. ಇಂಥ ಅನಿವಾಸಿ ಆತಂಕಗಳಿಗೆ ಕಾವೇರಿ ನದಿ ಒಂದು ನೆಪವಾಗಬಹುದು; ಅಥವಾ, ಹಿಂದೂ ಧರ್ಮ ಒಂದು ನೆಪವಾಗಬಹುದು; ಆದರೆ ಅಂಥ 'ನೆಪಗಳಲ್ಲದ ನೆಪ'ಗಳನ್ನುಎದುರಿಗಿಟ್ಟುಕೊಂಡು ಈ ಆತಂಕಗಳು ರಾಷ್ಟ್ರವ್ಯಾಪ್ತಿಯ ಸಂಘರ್ಷಗಳನ್ನು ಸೃಷ್ಟಿ ಮಾಡುತ್ತವೆ. ಇಲ್ಲದೇ ಹೋದರೆ, ಕರ್ನಾಟಕದ ದಕ್ಷಿಣದ ಮೂರು ಜಿಲ್ಲೆಗಳಲ್ಲಿ ಹರಿಯುವ ಒಂದು ನದಿ, ಕರ್ನಾಟಕದ 'ಜೀವ ನದಿ'ಯಾಗಿಯೂ ಕನ್ನಡಾಭಿಮಾನದ ಸಂಕೇತವಾಗಿಯೂ ವಿಶಾಲ ಕರ್ನಾಟಕದ ಒಂದು ಜಗಳಕ್ಕೆ ಕಣವಾಗಿಯೂ ಮಾರ್ಪಡುವುದು ಸಾಧ್ಯವಿತ್ತೆ? ಹೀಗೆ, ಇವತ್ತಿನ ಕಾಲದ ಇಂಥ ಎಲ್ಲ ಸಂಘರ್ಷ ನಿರ್ಮಾಣಗಳ ಹಿಂದೆಯೂ ನಾನು ಉಲ್ಲೇಖಿಸಿದ ಅನಿವಾಸಿ ಆತಂಕ ಇದೆ ಅನ್ನುವ ಕಾರಣದಿಂದಲೇ ಈ ಪ್ರಕ್ರಿಯೆಯನ್ನು ನಾವು ಕನ್ನಡ ಕಾವ್ಯದಲ್ಲೂ ಗುರುತಿಸಿಕೊಳ್ಳುವ ಕೆಲಸ ನನಗೆ ಬಹಳ ಮುಖ್ಯ ಎಂದು ಕಾಣುತ್ತದೆ.

ಉದಾಹರಣೆಗೆ, ಹಂಪಿಯ ಕನ್ನಡ ವಿಶ್ವವಿದ್ಯಾಲಯದವರು ಪ್ರಕಟಿಸಿರುವ 'ಕನ್ನಡ ತಾಯಿಗೆ ನುಡಿನಮನ' (ಸಂ: ಎಲ್.ಎಸ್.ಶೇಷಗಿರಿ ರಾವ್, ೧೯೯೩) ಎಂಬ

ಹೆಸರಿನ ಕನ್ನಡ ಕುರಿತ ಕವನಸಂಗ್ರಹವನ್ನು ಗಮನಿಸಿದರೆ, ಅದರಲ್ಲಿ ಒಂದು ವಿಶೇಷ ಸ್ಪಷ್ಟವಾಗುತ್ತದೆ. ಆಧುನಿಕ ಪೂರ್ವ ಕಾಲಗಳಲ್ಲಿ ಕನ್ನಡವನ್ನು ಕುರಿತು ಬರೆದ ಯಾವ ಕವಿಗಳಲ್ಲೂ ಕನ್ನಡದ ಬಗ್ಗೆ ಆತಂಕ ಇಲ್ಲ; ಪರದೇಶಿ ಭಾವವೂ ಇಲ್ಲ. ಆದರೆ ಆಧುನಿಕ ಯುಗ ಪ್ರಾರಂಭವಾಗುತ್ತಿದ್ದಂತೆ ಎಲ್ಲ ಕವಿಗಳಲ್ಲೂ ಇಂಥ ಅನಿವಾಸಿ ಆತಂಕ ಹತ್ತಾರು ಬಗೆಗಳಲ್ಲಿ ಎದ್ದು ಬರಲಾರಂಭಿಸುತ್ತದೆ. ದೃಷ್ಟಾಂತಕ್ಕೆ ಅದೇ ಸಂಕಲನದ ಬೇರೆ ಬೇರೆ ಪದ್ಯಗಳಿಂದ ಯಾದೃಚ್ಛಿಕವಾಗಿ ಎತ್ತಿದ ಈ ಕೆಲವು ಸಾಲುಗಳನ್ನೇ ನೋಡಿ–'ರಕ್ಷಿಸು ಕರ್ನಾಟಕ ದೇವಿ', 'ಸವೆದುಸವೆಯದ ಸಾಹಸತ್ವದ ಕ್ಷಾತ್ರಬೇಟೆಯ ಮೆರೆದರೋ?', 'ಕನ್ನಡದ ಬಾವುಟವ ಹಿಡಿಯಿರೋ', 'ನಿನ್ನ ಕಲಿಗಳ ಕೂರ್ಪು..... ಆರು ತಡೆಯಲು ಬಹುದು', 'ಹೆರರ ಕೂಗೇ ಕೂಗು; ಹೆರರದೇ ಹೆಮ್ಮೆ! ನನ್ನ ಮನೆ ಹಾಳು! ನನ್ನ ಮನೆ ಬೀಳು!', 'ಕನ್ನಡ ತಾಯ್ ಬೇರು ನೀರಡಸಿದೆ', 'ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ!', 'ಕಣ್ದೆರೆಯಿರೇಳಿ, ಓ ಕನ್ನಡದ ಮಕ್ಕಳಿರ', 'ಬಾರಿಸು ಕನ್ನಡ ಡಿಂಡಿಮವ' ಇತ್ಯಾದಿ ಇತ್ಯಾದಿ. ಈ ಪದ್ಯಗಳ ವಸ್ತು–ಧಾಟಿಗಳೆಲ್ಲ ಪರಸ್ಪರ ಸಾಕಷ್ಟು ಬೇರೆಬೇರೆಯಾಗಿದ್ದರೂ ಇವುಗಳ ಹಿಂದಿರುವ ಸ್ಥಾಯೀಭಾವದಲ್ಲಿ ಒಂದು ಏಕ ಸೂತ್ರತೆ ಇದೆ. ನಾನು ಪರದೇಶಿ, ನನಗೆ ನೆಲೆಯಿಲ್ಲ, ನಾನು ಕಳೆದುಕೊಳ್ಳುತ್ತಿದ್ದೇನೆ, ಅಪಾಯದಲ್ಲಿ ಸಿಲುಕಿದ್ದೇನೆ ಇತ್ಯಾದಿ ಇತ್ಯಾದಿ. ಈ ಭಾವವು ಇಂಥದೇ ಅನಿವಾಸಿ ಆತಂಕದ ಕನ್ನಡ ಚಳುವಳಿಯ ಕಥನದಲ್ಲಿರುವ ಭಾವನೆಗಳಿಗೂ ಸಮಾನಾಂತರವಾದದ್ದು ಎಂಬುದನ್ನು ನಾವು ಗಮನಿಸಬೇಕು. ಇವತ್ತಿನ ಕನ್ನಡ ಹೋರಾಟಗಾರರ ಈ ಕೆಲವು ಪ್ರಾತಿನಿಧಿಕ ಚಿತ್ರಣಗಳನ್ನೇ ಗಮನಿಸಿ.ಕನ್ನಡಿಗರು ಅಭಿಮಾನ ಶೂನ್ಯರು, ಎಲ್ಲಿ ಹೋದರೂ ಇವರು ತಮ್ಮ ಸ್ವಪ್ರತ್ಯಯವನ್ನು ಗಟ್ಟಿಯಾಗಿ ಕಟ್ಟುವುದಿಲ್ಲ; ಅದಕ್ಕೆ ವಿರುದ್ಧವಾಗಿ ತಮಿಳರನ್ನು ನೋಡಿ, ತೆಲುಗರನ್ನು ನೋಡಿ ......ಇತ್ಯಾದಿ ಇತ್ಯಾದಿ.

ಮೇಲಿನ ಉದಾಹರಣೆಗಳಲ್ಲಿಯೇ ಕಾಣುವಂತೆ, ಇಂಥ ಒಂದು ಕನ್ನಡದ ಹೋರಾಟಕ್ಕೆ, ಯುದ್ಧ ಮತ್ತು ಸಮರಕಲೆಯ ಪ್ರತಿಮೆಗಳೇ ಹೆಚ್ಚು ಉಪಯುಕ್ತವಾಗಿ ಒದಗಿ ಬರುತ್ತವೆ. ಬರೀ ನುಡಿಗಟ್ಟಿನ ನೆಲೆಯಲ್ಲಿ ಮಾತ್ರವಲ್ಲ ಛಂದಸ್ಸಿನ ನೆಲೆಯಲ್ಲೂ ಈ ಮಾತು ನಿಜ. ಉದಾಹರಣೆಗೆ ಈ ಆರಂಭಕಾಲದಲ್ಲಿ ಕನ್ನಡದ ಬಗ್ಗೆ ಬಂದಿರುವ ಬಹುಪಾಲು ದೇಶಭಕ್ತಿಗೀತೆಗಳು ಎರಡೆರಡು ಮಾತ್ರೆಗಳ 'ಮಾರ್ಚ್‌ಬೀಟ್' ನಲ್ಲಿಯೇ ಹೆಣೆಯಲ್ಪಟ್ಟಿರುವುದು ಆಕಸ್ಮಿಕವಲ್ಲ; ಅರ್ಥಾತ್, ಈ ಪದ್ಯಗಳ ನಡೆಯಲ್ಲೇ ಸೈನ್ಯದ ನಡೆಯ ಒಂದು ಪ್ರತಿಮೆ ನಮಗೆ ಕೇಳಿಸುವಂತಿದೆ. ಇಂಥ ಪದ್ಯಗಳ ಒಂದು ಉತ್ತುಂಗದ ಉದಾಹರಣೆಯಾಗಿ ನಾನು ಬಿ.ಎಂ.ಶ್ರೀ. ಅವರ ಪ್ರಸಿದ್ಧ ಪದ್ಯದ ಈ ಕೆಳಕಂಡ ಸಾಲುಗಳನ್ನು ಉಲ್ಲೇಖಿಸುತ್ತೇನೆ.

ಏರಿಸಿ, ಹಾರಿಸಿ ಕನ್ನಡದ ಬಾವುಟ!
ಓಹೋ, ಕನ್ನಡ ನಾಡು, ಆಹಾ ಕನ್ನಡನುಡಿ!
ಹಾರಿಸಿ, ತೋರಿಸಿ, ಕೆಚ್ಚೆದೆಯ ಬಾವುಟ!
ಗಾಳಿಯಲಿ ಫಟಫಟ, ದಾಳಿಯಲಿ ಚಟಚಟ,
ಉರಿಯಿತೋ ಉರಿಯಿತು ಹಗೆಯ ಹಟ, ಮನ ಮಟ
ಹಾಳ್ ಹಾಳ್ ಸುರಿಯಿತು ಹಗೆಯ ಬೀಡಕಟ್ಟು!

ಸ್ವಲ್ಪ ಒರಟಾಗಿ ಹೇಳುವುದಾದರೆ, ಕನ್ನಡ ಕಟ್ಟುವುದಕ್ಕೆ ಮೊದಲು ಎದುರುಗಡೆಯ ಮನೆಯನ್ನು ಸುಟ್ಟು ಕನ್ನಡ ಕಟ್ಟಬೇಕು ಎನ್ನುವ ಒಂದು ರೂಪಕವನ್ನು ಈ ಪದ್ಯ ನಮ್ಮ ಮುಂದಿಡುತ್ತಿದೆ. ಆದರೆ ನಮಗೆಲ್ಲ ಗೊತ್ತಿದೆ, ಈ ಪದ್ಯವನ್ನು ಬರೆದ ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು ಕಲ್ಲು ಹೊಡೆಯುವ ಕನ್ನಡ ಹೋರಾಟವನ್ನೆಂದು ಮಾಡಿದವರಲ್ಲ; ಬದಲು, ಇಂಗ್ಲೀಷ್ ಗೀತೆಗಳನ್ನು ಕನ್ನಡದಲ್ಲಿ ಮರುಹೆರಿಗೆ ಮಾಡಿಸಿದ ಮಹಾನುಭಾವರು ಇತ್ಯಾದಿ. ಹಾಗಿದ್ದರೂ, ಅವರ ಪದ್ಯಗಳಲ್ಲಿ ಇಂಥ ಉಗ್ರಗಾಮಿ ಕನ್ನಡ ಹೋರಾಟದ ರೂಪಕಗಳೂ ನುಡಿಗಟ್ಟುಗಳೂ ನುಸುಳುವುದಕ್ಕೆ ಕಾರಣ, ನನಗನ್ನಿಸುವಂತೆ, ಕನ್ನಡರಾಷ್ಟ್ರದ ನಿರ್ಮಾಣದ ಐಡಿಯಾಲಜಿಯಲ್ಲಿಯೇ ಈ ಬಗೆಯ ಒಂದು ಉಗ್ರಗಾಮಿತ್ವ ಇದೆ.ಐಡಿಯಾಲಜಿ ಎಂಬ ಶಬ್ದಕ್ಕೆ 'ಜನಮಾನಸದೊಳಕ್ಕೆ ಸರ್ವವ್ಯಾಪಿಯಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ಅಡಕವಾಗುವ ಅವ್ಯಕ್ತ ಧೋರಣೆಗಳ ಸಮುಚ್ಚಯ' ಎಂಬ ವಿಶೇಷಾರ್ಥದ ಒಂದುವ್ಯಾಖ್ಯಾನವನ್ನು ಪ್ರಸಿದ್ಧ ಪಾಶ್ಚಾತ್ಯ ಚಿಂತಕ ಅಲ್ಥೂಸರ್ ಕೊಡುತ್ತಾನೆ. ಅಂಥ ಒಂದು ಅಲ್ಥೂಸರ್‌ಪ್ರಣೀತ ಐಡಾಲಜಿಯು ಆ ಕಾಲದ ನಮ್ಮ ಎಂಥೆಂಥಾ ಧೀಮಂತ ಮನಸ್ಸುಗಳನ್ನೂ ಹೇಗೆ ಪ್ರವೇಶ ಮಾಡಿದೆ ಅನ್ನುವುದಕ್ಕೆ ಉದಾಹರಣೆಯಾಗಿ ನಾನು ಇಂಥ ಪದ್ಯಗಳನ್ನು ನೋಡಲು ಬಯಸುತ್ತೇನೆ. ಈ ಮಾತನ್ನು ಈ ಲೇಖನದಲ್ಲಿ ನಾನು ಉಲ್ಲೇಖಿಸುವ ಇನ್ನೂ ಅನೇಕ ಕವಿಗಳ ವಿಷಯಕ್ಕೂ ವಿಸ್ತರಿಸಿ ಅನ್ವಯಿಸಬಹುದು.

ಕೆಲವೇ ಕೆಲವು ಪದ್ಯಗಳು ಮಾತ್ರ ಇಂಥ ಐಡಿಯಾಲಜಿಯೊಳಗೆ ಉದ್ಭವಿಸಿಯೂ, ಆ ಬಗೆಯ ಕಾವ್ಯದ ಹೊರ ರೂಪಗಳನ್ನೆಲ್ಲ ಅನುಕರಿಸಿಯೂ, ವ್ಯಂಗ್ಯದ ಮೂಲಕ ಅಥವಾ ಪರಿಚಿತವನ್ನು ಸಮಸ್ಯೀಕರಿಸುವ ಮೂಲಕ, ಅದರ ಒಳಗಡೆಯೇ ಒಂದು ಬಿಡುಗಡೆಯನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿವೆ. ಎಂಬುದನ್ನೂ ನಾವು ಅಗತ್ಯ ಗಮನಿಸಬೇಕು. ಅಂಥ ಉಲ್ಲಂಘನೆಗೆ ನಾನಿಲ್ಲಿ ಒಂದು ಸ್ವಾರಸ್ಯದ ಉದಹರಣೆಯನ್ನು ಕೊಡುತ್ತೇನೆ. ಅದು ಬೇಂದ್ರೆಯವರ 'ಒಂದೇ ಕರ್ನಾಟಕ' ಎಂಬ ಹೆಸರಿನ ಒಂದು ಪದ್ಯ. ಆ ಪದ್ಯದ ಕೆಲವು ಸಾಲುಗಳು ಹೀಗಿವೆ:

ಒಂದೇ ಒಂದೇ ಒಂದೇ ಕರ್ನಾಟಕ ಒಂದೇ
ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ,
ಜಗದೇಳಿಗೆಯಾಗುವುದಿದೆ ಅದು ಕರ್ನಾಟಕದಿಂದೇ...

ಒಂದೇ ಜನವು, ಒಂದೇ ಮನವು ಕನ್ನಡಿಗರು ಎಂದೇ
ಕುಲವೊಂದೇ ಸ್ಥಳವೊಂದೇ ನೀತಿಯ ನೆಲೆಯೊಂದೇ
ಹೀಗೆನ್ನದ ಹೆರವರು ಅವರಿದ್ದರು ಒಂದೆ,
ಇರದಿದ್ದರು ಒಂದೆ.

ಮೇಲ್ನೋಟಕ್ಕೆ ನೋಡಿದರೆ, ಈ ಪದ್ಯವೂ ಕೂಡ ಬಹುಪಾಲು ಕನ್ನಡದ ದೇಶಭಕ್ತಿಗೀತೆಗಳ ಹಾಗೆ, ಉದ್ಘೋಷಪರವಾದದ್ದು ಅನ್ನಿಸುತ್ತದೆ; ಇದರಲ್ಲೂ ಮಾರ್ಚ್‌ಬೀಟಿನ ಛಂದಸ್ಸೇ ಇದೆ; ಹಾಗಾಗಿ, ಈ ಹಾಡನ್ನೂ ಕೂಡ ಇದರ ಹಿನ್ನೆಲೆಯ ಸ್ಪಷ್ಟ ಅರಿವಿಲ್ಲದ ಅನೇಕರು ಕನ್ನಡಪರ ಸಭೆ ಸಮಾರಂಭಗಳಲ್ಲಿ ಹಾಡುವುದೂ ಇದೆ. ಆದರೆ ಮೇಲಿನ ಉಲ್ಲೇಖದ 'ಹೀಗೆನ್ನದ ಹೆರವರು ಅವರಿದ್ದರು ಒಂದೇ, ಇರದಿದ್ದರು

ಒಂದೆ' ಎಂಬ ಕಡೆಯ ಸಾಲನ್ನು ಕೇಳಿದಾಗ ಮಾತ್ರ, ಈ ಪದ್ಯ ಏನೋ ಒಂದು ಬಗೆಯ ವೈಚಿತ್ರ್ಯವನ್ನು ತನ್ನೊಳಗೆ ಹುದುಗಿಸಿಕೊಂಡಿರುವ ಸುಳಿವುಗಳು ಕಾಣಲಿಕ್ಕೆ ಸಿಗುತ್ತವೆ. ಈ ಪದ್ಯದ ನಿರ್ದಿಷ್ಟ ಹಿನ್ನೆಲೆಯನ್ನು ಕೆದಕಿ ನೋಡಿದರೆ, ಈ ಹಿನ್ನೆಲೆ ನಮಗೆ ಸ್ಪಷ್ಟವಾಗುತ್ತದೆ.

ಈ ಪದ್ಯವನ್ನು ಬೇಂದ್ರೆಯವರು ಬರೆದಿದ್ದು ೧೯೩೮ರಲ್ಲಿ ಆಗ 'ಜಯಂತಿ' ಮಾಸಪತ್ರಿಕೆಯಲ್ಲಿ ಹಿಟ್ಲರನ ಬಗ್ಗೆ ಚರ್ಚೆಗಳು ನಡೆಯುತ್ತಿದ್ದವಂತೆ. ಅದಕ್ಕೆ ಪ್ರತಿಕ್ರಿಯೆಯಾಗಿ ಶಿವರಾಮ ಕಾರಂತರು ಅದೇ ಪತ್ರಿಕೆಯಲ್ಲಿ ಒಂದು ವಿಡಂಬನಾ ಲೇಖನ ಬರೆದು ಕನ್ನಡದಲ್ಲೇನಾದರೂ ಹಿಟ್ಲರ್ ಬಂದರೆ, ಇಲ್ಲಿಯ ಲೇಖಕರ ಹೆಸರುಗಳೆಲ್ಲಾ ಬದಲಾಯಿಸಲ್ಪಡುತ್ತವೆ- ಕಾರಂತರು ಹರ್‌ರಾಂಟ್ ಆಗುತ್ತಾರೆ, ಬೇಂದ್ರೆಯವರು ಹರ್‌ಬೆಂಡರ್ ಆಗುತ್ತಾರೆ ಜಾಗೀರದಾರ್ ಅವರು ಹರ್‌ಜಡೀರ್ ಆಗುತ್ತಾರೆ ಎಂದು ಸೂಚಿಸಿದ್ದರಂತೆ. ಅಂಥ ವಾದಕ್ಕೆ ಒಂದು ಪ್ರತಿಸ್ಪಂದನೆಯಾಗಿ ಬೇಂದ್ರೆಯವರು ಮೇಲಿನ ಪದ್ಯ ಬರೆದಿದ್ದು. ಮತ್ತು, ಒಂದು ವೇಳೆ ಹಾಗೆ ಹಿಟ್ಲರ್‌ನ 'ನಾಸ್ತಿವಾದ' (ನಾಜಿವಾದದ ಕನ್ನಡರೂಪ!) ಬಂದರೆ, ಆಗ ಕರ್ನಾಟಕದ ರಾಷ್ಟ್ರಗೀತೆ ಹೀಗಿದ್ದೀತು ಎನ್ನುವ ವ್ಯಂಗ್ಯದಲ್ಲಿ ಈ ಪದ್ಯವನ್ನು ಅವರು ಬರೆದಿದ್ದರಂತೆ! ಮೊದಲ ಪ್ರಕಟಣೆಯಲ್ಲಿ ಈ ಪದ್ಯಕ್ಕೆ ಮೊದಲು 'ನಾಸ್ತಿ ರೆಕಾರ್ಡ್ ಕಂಪೆನಿಯವರು ಬ್ರಾಡ್‌ಕಾಸ್ಟ್ ಮಾಡಿದ ಹರ್‌ಬಂಡರ್ ಇವರ ಗೀತ' ಎಂಬ ಉಲ್ಲೇಖ ಕೂಡ ನಮೂದಾಗಿತ್ತಂತೆ. ಅರ್ಥಾತ್, ಕಡೆಯೆರಡು ಸಾಲುಗಳಲ್ಲಿ ವಿಚಿತ್ರವಾಗಿ ನುಸುಳಿರುವ 'ಹೀಗೆನ್ನದ ಹೆರವರು ಅವರಿದ್ದರು ಒಂದೆ, ಇರದಿದ್ದರು ಒಂದೆ' ಎಂಬ ಉಲ್ಲೇಖಕ್ಕೆ ಮತ್ತು ಮುಂದೆ ಈ ಪದ್ಯದಲ್ಲಿ ಬರುವ 'ಉಗ್ಗಡಿಸಿರಿ ನಾಸ್ತಿಗೆ ಜಯಜಯಜಯವೆಂದೆ' ಎಂಬ ಸಾಲಿಗೆ ಹಿನ್ನೆಲೆ ಇದು. (ಡಾ। 'ಜೀವಿ'ಕುಲಕರ್ಣಿ, ನಾ ಕಂಡ ಬೇಂದ್ರೆ: ಜೀವನ ಮತ್ತು ಸಾಹಿತ್ಯ , ಮುಂಬಯಿ: ಹರ್ಷವರ್ಧನ ಪ್ರಕಾಶನ, ೧೯೯೭, ಪುಟ ೫೬-೫೮).

ಈಗ, ಈ ಹಿನ್ನೆಲೆಯನ್ನಿಟ್ಟುಕೊಂಡು ಈ ಪದ್ಯವನ್ನು ಮತ್ತೊಮ್ಮೆ ಓದತೊಡಗಿದರೆ. ಆಗ ಇಡೀ ಪದ್ಯವೇ ಕನ್ನಡ ಹೋರಾಟವನ್ನು ಲೇವಡಿ ಮಾಡುವ ಪದ್ಯವಾಗಿ ಕಾಣತೊಡಗುತ್ತದೆ! ಮಾತ್ರವಲ್ಲ, ಇವತ್ತಿನ ಕನ್ನಡ ಹೋರಾಟವು ಆವೇಶಭರಿತವಾಗಿ ಉದ್ದೇಪಿಸಿಕೊಳ್ಳುವ ಉಗ್ರಾಮಿತ್ವವೂ ಕೂಡ ಇಲ್ಲಿ ವ್ಯಂಗ್ಯಕ್ಕೊಳಗಾಗುತ್ತದೆ. ಇಂಥ ಒಂದು ಮುಸುಕಿನ ಗುದ್ದನ್ನು ಬೇಂದ್ರೆಯವರು ಈ ಪದ್ಯದ ಮೂಲಕ ಕೊಡುತ್ತಾರೆ; ಆದರೆ, ಕನ್ನಡ ರಾಷ್ಟ್ರಭಕ್ತರಿಗೆ ಕಾಣುವ ಗುದ್ದಲ್ಲ ಅದು. ಹಾಗಿದ್ದರೆ,ಇಂಥ ವ್ಯಂಗ್ಯ ಮತ್ತು ಅನ್ಯೋಕ್ತಿಯಿಂದ ಸಾಧಿತವಾಗುವುದೇನು? ಮೊದಲನೆಯದಾಗಿ, ಇಂಥ ಮಾರ್ಗದಿಂದ ಕನ್ನಡ ರಾಷ್ಟ್ರೀಯತೆಯ ಉಗ್ರಾಮಿತ್ವದಿಂದ ಕನ್ನಡ ಕವಿತೆಯು ತನ್ನನ್ನು ತಾನು ದೂರೀಕರಿಸುವ ದಾರಿಯೊಂದನ್ನು ಹುಡುಕಿಕೊಳ್ಳುತ್ತದೆ; ಮತ್ತು ಎರಡನೆಯದಾಗಿ, ಅದಕ್ಕಿಂತ ಮುಖ್ಯವಾದ ಸಾಧನೆಯೆಂದರೆ, ಅಲ್ಥೂಸರ್ ಹೇಳುವ ಸರ್ವವ್ಯಾಪಿ 'ಐಡಿಯಾಲಜಿ'ಯನ್ನು ಮೀರಿದ ಒಂದು ಸಂವಹನೆಯು ಕಾವ್ಯಕ್ಕೆ ಸಾಧ್ಯ ಎಂಬುದನ್ನು ಇಂಥ ಪದ್ಯಗಳು ಸಾಬೀತು ಮಾಡಿ ತೋರಿಸುತ್ತವೆ.

ಈಗ ಎರಡನೇ ರೀತಿಯ ಆತಂಕದ ವಿಷಯಕ್ಕೆ ಬರುತ್ತೇನೆ; ಅದನ್ನು ನಾನು 'ಸೇರ್ಪಡೆ ಮತ್ತು ಬೇರ್ಪಡೆಗಳ ಆತಂಕ' ಆ್ಯಂಗ್‌ಸೈಟೀ ಆಫ್ ಇನ್‌ಕ್ಲೂಷನ್ ಎಂಡ್

ಎಕ್ಸ್‌ಕ್ಲೂಷನ್ ಎಂದು ಕರೆದುಕೊಳ್ಳುತ್ತೇನೆ. ಈ ಬಗೆಯ ಕನ್ನಡ ದೇಶಭಕ್ತಿಗೀತೆಗಳಿಗೆ ಸುಲಭವಾಗಿ ಗುರುತುಹಿಡಿಯಲು ಸಾಧ್ಯವಾಗುವಂಥ ಒಂದು ಗುಣವಿದೆ ಇವುಗಳಲ್ಲಿ ಕನ್ನಡರಾಷ್ಟ್ರದೊಳಕ್ಕೆ ಇರುವ ನಾನಾ ಬಗೆಯ 'ಸಂಪತ್ತು'ಗಳ ಒಂದು ವರ್ಣನಾತ್ಮಕ ತಪಶೀಲು ಇರುತ್ತದೆ.ಕನ್ನಡದ ಬಗ್ಗೆ ಇಂಥ ಅನೇಕ ಪದ್ಯಗಳನ್ನು ನಮ್ಮ ಶಾಲೆಗಳಲ್ಲಿ ಪಠ್ಯವಾಗಿ ನಾವೆಲ್ಲ ಓದಿರುತ್ತೇವೆ. ಒಂದು ಪದ್ಯ ಅಂದು ಉರು ಹೊಡೆದಿದ್ದು ಇವತ್ತಿಗೂ ನನ್ನ ಮನಸ್ಸಿನಲ್ಲಿ ನಿಂತಿದೆ. 'ನಮ್ಮ ನಾಡು ಕನ್ನಡ, ನಮ್ಮ ನುಡಿಯು ಕನ್ನಡ, ಚಾಲುಕ್ಯ ರಾಷ್ಟ್ರಕೂಟ ವಿಜಯನಗರ ದೊರೆಗಳ, ಸೋಮ, ಭೀಮ, ಚಾಮ, ಕುವರ, ವ್ಯಾಸ ಷಡಕ್ಷರಾರ್ಯರ ... ನಮ್ಮ ಭೂಮಿ ಕನ್ನಡ ...' ಇತ್ಯಾದಿ. ಸ್ವಾರಸ್ಯವೆಂದರೆ ಇಂಥ ಅನೇಕ ಪದ್ಯಗಳು ಜಾನಪದವೆಂದು ಕರೆಯಲಾಗುವ ಕಾವ್ಯಗಳಲ್ಲೂ ಬಂದಿದೆ. ಈಚೆಗೆ ಅದು ಕನ್ನಡದ ಸಿನೆಮಾ ಹಾಡುಗಳಲ್ಲೂ ಬಂದಿದೆ. ಧಾರವಾಡ, ಬೆಳಗಾಂ, ಅಲ್ಲಿಯ ಬೋಂಡ, ಇಲ್ಲಿಯ ಮೆಣಸಿನಕಾಯಿ ಇತ್ಯಾದಿ, ಇತ್ಯಾದಿ.

ಮಾತ್ರವಲ್ಲ, ಆದಿಕಾಲದಿಂದಲೂ ಕನ್ನಡ ಮನಸ್ಸಿನಲ್ಲಿ ಈ ಥರದ ಒಂದು ರೂಪಕ ಕೆಲಸ ಮಾಡಿದಂತೆ ಕಾಣುತ್ತದೆ; ಅಂದರೆ, ಕರ್ನಾಟಕ ಅಂದರೆ ಏನು ಅನ್ನುವುದನ್ನು ಕಂಡುಹಿಡಿಯುವ, ಗುರುತಿಸುವ, ಪಟ್ಟಿ ಮಾಡುವ ಮಾರ್ಗ ಇದು. ಆಧುನಿಕಪೂರ್ವ ಕಾಲದಲ್ಲಿ ಉದಾಹರಣೆಗೆ, ಕವಿರಾಜಮಾರ್ಗಕಾರನೂ ಕನ್ನಡ ನಾಡಿನ ಇಂಥದೊಂದು ಚಿತ್ರವನ್ನು ಕೊಟ್ಟಿದ್ದ. 'ಕಾವೇರಿಯಿಂದ ಗೋದಾವರಿಯವರೆಗೆ ವಿಶಾಲ ಪ್ರಪಂಚದೊಳಗೆ ವಿಲೀನವಾಗಿರುವ ಒಂದು ವಿಷಯ ವಿಶೇಷ'. ಆದರೆ ಆಧುನಿಕ ಕಾಲದ ಸಮಸ್ಯೆ ಏನು ಅಂದರೆ, ಅಷ್ಟು ಸ್ಥೂಲವಾದ ಉತ್ತರ ನಮಗಿವತ್ತು ಸಾಕಾಗುವುದಿಲ್ಲ. ಗಡಿರೇಖೆಗಳನ್ನೊಳಗೊಂಡ ಭೂಪಟದ ಕಲ್ಪನೆಯನ್ನು ಒಪ್ಪಿಕೊಂಡಿರುವ ಆಧುನಿಕ ಮನಸ್ಸಿಗೆ ಕವಿರಾಜಮಾರ್ಗದ ವ್ಯಾಖ್ಯೆ ಅಸ್ಪಷ್ಟ ಮಾತ್ರವಲ್ಲ ಅಪ್ರಸ್ತುತವಾಗಿಯೂ ಕಾಣುತ್ತದೆ. ಆದ್ದರಿಂದಲೇ ಆಧುನಿಕ ಕಾಲದ ಇಂಥ ಕವಿತೆಗಳೆಲ್ಲವೂ ಮೂರ್ತ ವಿವರಗಳ ಪಟ್ಟಿಗೆ ಶರಣಾಗುತ್ತವೆ. ಮಾತ್ರವಲ್ಲ, ನಿರ್ಧಿಷ್ಟವಾಗಿ ಕನ್ನಡರಾಷ್ಟ್ರದೊಳಕ್ಕೆ ಸೇರುವಂಥದು ಯಾವುದು ಸೇರದೆ ಉಳಿಯುವುದು ಯಾವುದು ಎಂಬುದನ್ನು ಗುರುತಿಸುವುದಕ್ಕೆ ಇವು ಪ್ರಯತ್ನ ಮಾಡುತ್ತವೆ. ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'ದಿಂದ ಆರಂಭವಾಗಿ ನಿಸಾರ್ ಅಹಮದ್ ಅವರ 'ನಿತ್ಯೋತ್ಸವ'ದ ವರೆಗೆ ಹಬ್ಬಿರುವ ಇಂಥ ಮಾರ್ಗದ ಬಹುಪಾಲು ಪದ್ಯಗಳು ಲಯಬದ್ಧ ಪಟ್ಟಿಗಳು; ಕೆಲವೊಮ್ಮೆ 'ನಿತ್ಯೋತ್ಸವ'ದಂಥ ಕವಿತೆಗಳಲ್ಲಿ ಅವಕ್ಕೆ ಭಾವೋದ್ದೀಪಕ ಗುಣ ಇದ್ದರೂ ಅದರ ಪರಿಣಾಮ, ನನಗನ್ನಿಸುವಂತೆ, ಕೆ.ಎಸ್.ಟಿ.ಡಿ.ಸಿ.ಯ ಬ್ರೋಷರ್ ಓದುವುದಕ್ಕಿಂತ ಹೆಚ್ಚಿನದೇನೂ ಅಲ್ಲ.

ಕನ್ನಡವನ್ನು ಕುರಿತು ಬರೆದ ಈ ಬಗೆಯ ಪದ್ಯಗಳಿಗೆ ತಪಶೀಲುಗಳಿಗಿಂತ ಹೆಚ್ಚಿನ ಧ್ವನಿ ಇಲ್ಲ ಎನ್ನುವುದೇ ಮುಖ್ಯವಾದ ಸಮಸ್ಯೆಯೇನೂ ಅಲ್ಲ. ಕಾರಣ, ಜನಪ್ರಿಯ ನೆಲೆಯಲ್ಲಿ ಇಂಥ ಪದ್ಯಗಳಿಗೆ ಒಂದು ಬಗೆಯ ಉತ್ಸಾಹ ತುಂಬುವ ಉತ್ಸವ ಗುಣ ಇದ್ದು ಅಷ್ಟರ ಮಟ್ಟಿಗೆ ಈ ಕಾವ್ಯಗಳು ಉಪಯುಕ್ತವಾಗಿಯೂ ಕೆಲಸ ಮಾಡಿವೆ. ಆದರೆ ಇದೆಲ್ಲಕ್ಕಿಂತ ಗಹನವಾದ ಮತ್ತು ಕ್ಲಿಷ್ಟವಾದ ಇನ್ನೊಂದು ಸಮಸ್ಯೆ ಇಂಥ ಪದ್ಯಗಳಲ್ಲಿ ಇದೆ; ಅದನ್ನೇ ನಾನು 'ಸೇರ್ಪಡೆ ಮತ್ತು ಬೇರ್ಪಡೆಗಳ

ಆತಂಕ' ಎಂದು ಗುರುತಿಸಿರುವುದು. ಈ ಸಮಸ್ಯೆ ಯಾವುದೆಂದರೆ, ನಾವು ಒಂದು ಸೇರ್ಪಡೆಯ ರಾಜಕಾರಣವನ್ನು ಪ್ರಾರಂಭ ಮಾಡುತ್ತಿದ್ದಂತೆಯೇ, ಅನಿವಾರ್ಯವಾಗಿ ಅದರ ಜೊತೆಗೆ ಬೇರ್ಪಡೆಯ ರಾಜಕಾರಣ ಕೂಡ ಕೂಡಿಕೊಂಡು ಬರುತ್ತದೆ. ಈಚೆಗೆ ವಿವಾದಕ್ಕೊಳಗಾದ 'ನಾಡಗೀತೆಯ ಉದಾಹರಣೆಯನ್ನೇ ಪ್ರಸ್ತಾಪ ಮಾಡುವುದಾದರೆ, ನೀವು 'ಶಂಕರ ರಾಮಾನುಜ ವಿದ್ಯಾರಣ್ಯ' ಅಂತ ಹೇಳಿದ ತಕ್ಷಣ 'ಮಧ್ವರು ಎಲ್ಲಿ ಹೋದರು?' ಅನ್ನುವ ಪ್ರಶ್ನೆ ತಂತಾನೆ ಉದ್ಭವಿಸುತ್ತದೆ; ಇವತ್ತಿನ ಪ್ರಜಾಸತ್ತಾತ್ಮಕ ರಾಜಕಾರಣದಲ್ಲಿ ಅದು ಅನಿವಾರ್ಯ. ಆದ್ದರಿಂದ ಕನ್ನಡದ ಬಹುತೇಕ ಇಂಥ ಪದ್ಯಗಳನ್ನು ನಾವು ಇವತ್ತು ಓದಲಿಕ್ಕೆ ಆರಂಭಿಸಿದರೆ ನಮಗೆ ಸೇರ್ಪಡೆಗಳಿಗಿಂತ ಹೆಚ್ಚಾಗಿ ಬೇರ್ಪಡೆಗಳೇ ಎದ್ದು ಕಾಣುವ ವ್ಯಂಗ್ಯ ಈ ಬಗೆಯ ಪದ್ಯಗಳ ಒಡಲಿನಿಂದಲೇ ಉದ್ಭವವಾಗುತ್ತದೆ. ಇದಕ್ಕೆ ಕುವೆಂಪು ಅವರ ಕಾವ್ಯದಿಂದಲೇ ಇನ್ನೊಂದು ಉದಾಹರಣೆ ಕೊಡುತ್ತೇನೆ. 'ಅಖಂಡ ಕರ್ನಾಟಕ' ಎಂಬ ಈ ಪದ್ಯದಲ್ಲಿ ಕುವೆಂಪು ಅವರು ಕನ್ನಡರಾಷ್ಟ್ರದ ಒಂದು ಕಾಲ್ಪನಿಕ ಮಂತ್ರಿಮಂಡಳವನ್ನು ಕಟ್ಟಿದ್ದಾರೆ:

ಅಖಂಡ ಕರ್ನಾಟಕ:
ಅಲ್ತೋ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ!
ನೃಪತುಂಗನೇ ಚಕ್ರವರ್ತಿ!
ಪಂಪನಲ್ಲಿ ಮುಖ್ಯಮಂತ್ರಿ !
ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿಹರ
ಬಸವೇಶ್ವರ ನಾರಣಪ್ಪ
ಸರ್ವಜ್ಞ ಷಡಕ್ಷರ
ಸರಸ್ವತಿಯೆ ರಚಿಸಿದೊಂದು
ನಿತ್ಯ ಸಚಿವ ಮಂಡಲ
ತನಗೆ ರುಚಿರ ಕುಂಡಲ!

ಈ ಮಂತ್ರಿಮಂಡಳದ ಸಮಸ್ಯೆ ಏನೆಂಬುದು ಅರ್ಥವಾಗಲಿಕ್ಕೆ ಇದನ್ನು ಇವತ್ತು ನಮ್ಮನ್ನಾಳುತ್ತಿರುವ ಕುಮಾರಸ್ವಾಮಿಯವರ ಕ್ಯಾಬಿನೆಟ್‌ಗೆ ಹೋಲಿಸಿ ನೋಡಬೇಕು. ಇವೆರಡರಲ್ಲೂ ಒಂದೇ ಸಮಸ್ಯೆ, ಎರಡರಲ್ಲೂ ಹೆಂಗಸರಿಲ್ಲ! ಅಥವಾ ಇವತ್ತು ಕರ್ನಾಟಕ ಸರಕಾರವು ರಾಷ್ಟ್ರಕವಿ ಎನ್ನುವ ಪದವಿಯನ್ನು ಪುನರ್‌ಸ್ಥಾಪನೆ ಮಾಡಿರುವ ಸಂಗತಿಯನ್ನೂ ಇದಕ್ಕೆ ಸಮಾನಾಂತರವಾಗಿ ನೋಡಬಹುದು. ಇಂಥ ಒಬ್ಬ ಕವಿಯನ್ನು ರಾಷ್ಟ್ರಕವಿ ಎಂದು ಕರೆಯುತ್ತಿದ್ದಂತೆ, ಹಾಗಾದರೆ ಉಳಿದ ಕನ್ನಡ ಕವಿಗಳೆಲ್ಲ ರಾಷ್ಟ್ರವಿರೋಧಿ ಕವಿಗಳೇ? –ಎಂಬ ಅಧಿಕ ಪ್ರಸಂಗದ ಪ್ರಶ್ನೆ ಹುಟ್ಟುತ್ತದೆ. ಕಾರಣ, ಪ್ರಜಾಸತ್ತೆಯೊಂದರಲ್ಲಿ ಇಂಥ ಸೇರ್ಪಡೆ/ಬೇರ್ಪಡೆಗಳೇ ದೊಡ್ಡ ಸಮಸ್ಯೆ. ನನ್ನ ಪ್ರಕಾರ, ರಾಷ್ಟ್ರಕವಿ ಎಂಬ ಪದವಿಗಿಂತ ಆಸ್ಥಾನಕವಿ ಎನ್ನುವ ಪದವಿಯೇ ಹೆಚ್ಚು ಪ್ರಜಾಸತ್ತಾತ್ಮಕ; ಯಾಕೆಂದರೆ, ರಾಷ್ಟ್ರಕವಿ ಒಬ್ಬರೇ ಇರಲು ಸಾಧ್ಯ, ಆದರೆ ಆಸ್ಥಾನಕವಿಗಳು ಹತ್ತಾರು ಇದ್ದರೂ ನಡೆಯುತ್ತದೆ!

ಇಂಥ ಸಮಸ್ಯೆಯನ್ನು ಕೂಡ ಕನ್ನಡ ಕವಿಗಳಲ್ಲಿ ಕೆಲವರು ತುಂಬ ಸಮರ್ಥವಾಗಿ ಎದುರಿಸಿ ಗೆದ್ದಿದ್ದಾರೆ. ಉದಾಹರಣೆಗೆ, ಗೋಪಾಲಕೃಷ್ಣ ಅಡಿಗರ

ಒಂದು ಪದ್ಯವು ಇಂಥ ಸಮಸ್ಯೆಗೆ ಪ್ರತಿಕ್ರಿಯೆಯೋ ಎಂಬಂತೆ 'ಕನ್ನಡವೆಂದರೆ ತಾಯಿಯೇ ದೇವಿಯೇ ನಾನು ನೀನು ಅವರು/ಜನಮನದೊಳಗುದಿ ತುಡಿತ ಕಡಿತಗಳ ಪ್ರತಿಕೃತಿಗಳ ನೂರಾರು' ಎನ್ನುತ್ತದೆ ಮಾತ್ರವಲ್ಲ, 'ಪಂಪ ಕುಮಾರವ್ಯಾಸರ ದಾಸರ ಶರಣರ ಜ್ಯೋತಿರ್ಲಿಂಗ' ಎಂಬ ತಪಶೀಲೊಂದನ್ನು ಪ್ರಾರಂಭಿಸಿ ಮರು ಉಸಿರಿಗೇ 'ತಿಮ್ಮನ ಬೋರನ ಈರ ಗಮಾರರ ಹೃದಯ ಸಹಜ ತರಂಗ' ಎಂದು ಕೂಡಿಸುತ್ತದೆ. ಕಾರಣ, ಪಂಪ ಕುಮಾರವ್ಯಾಸ ಅಂದ ತಕ್ಷಣ ಮಲೆ ಮಾದೇಶ್ವರ ಕಾವ್ಯ ಯಾಕೆ ಸೇರಲಿಲ್ಲ ಅನ್ನುವ ಪ್ರಶ್ನೆ ಏಳುತ್ತದೆ; ಆದರೆ ಅಡಿಗರು 'ತಿಮ್ಮ ಈರ ಗಮಾರ' ಎಂದು ಸೇರಿಸುವ ಮೂಲಕ ಈ ಕಲ್ಪಿತ ಮಹನೀಯರ ಪಟ್ಟಿಯನ್ನು ದೊಡ್ಡ ಬಹುಸಂಖ್ಯಾತ ವರ್ಗವೊಂದರ ಜೊತೆ ಕೂಡ ಸಮೀಕರಿಸಿ ಆ ಮೂಲಕ ಈ ಬೇರ್ಪಡೆಯ ಅಪಾಯದಿಂದ ಪಾರಾಗಿದ್ದಾರೆ.

ಹಾಗೆಯೇ, ಕುವೆಂಪು ಅವರ 'ಹೋಗುವೆನು ನಾ' ಪದ್ಯವನ್ನು ಇವತ್ತು ಓದುವಾಗ ನನಗೆ ಅದು ಇಂಥ ಒಂದು ತಪಶೀಲಿನ ಪದ್ಯಗಾರಿಕೆಯನ್ನು ವಿಶೇಷವಾದ ಒಂದು ಕಾವ್ಯಾತ್ಮಕ ಎತ್ತರಕ್ಕೆ ಏರಿಸಿದೆ ಅನ್ನಿಸುತ್ತದೆ. ಈ ಪದ್ಯದಲ್ಲೂ ಮಲೆನಾಡಿನಲ್ಲಿರುವ ಪ್ರಾಣಿಪಕ್ಷಿಕ್ರಿಮಿಕೀಟಾದಿಗಳ ದೀರ್ಘಪಟ್ಟಿಗಳು ಬರುತ್ತವೆ. 'ದೊಡ್ಡು, ಕಡ, ಮಿಗ, ಮುಸಿಯ, ಕೋಡಗ, ಎರಳೆ, ಸಾರಗ, ಬರ್ಕವು' ಇತ್ಯಾದಿ. ಆದರೆ ಆ ಪದ್ಯದಲ್ಲೇ ಕ್ರಮೇಣ ಹುಟ್ಟುವ ಇನ್ನೊಂದು ಧ್ವನಿ ನಮಗೆ ಸೂಚಿಸುತ್ತದೆ. ಇದು ಇದ್ದ ಅಥವಾ ಇರುವ ಮಲೆನಾಡನ್ನು ಕುರಿತ ಪದ್ಯವಲ್ಲ, ಬದಲು, ಕಾಲ್ಪನಿಕವಾದ ಒಂದು ಮಲೆನಾಡಿನ ಪದ್ಯ ಎಂದು. ಆದ್ದರಿಂದಲೇ ಈ ಪದ್ಯವು ಸರಳೀಕೃತವಾದ ಸ್ವದೇಶವೊಂದರ ಸೃಷ್ಟಿಯಾಗಿದೆ, ಬದಲು ಒಂದು ಅಭೀಪ್ಸೆಯ ಅಭಿವ್ಯಕ್ತಿಯಾಗಿ ರೂಪಾಂತರಗೊಳ್ಳುತ್ತದೆ. ಅಥವಾ ಕಾಲ್ಪನಿಕವಾದ ಒಂದು ದೇಶಭ್ರಷ್ಟತೆಗೆ ಕವಿ ಸೂಚಿಸುತ್ತಿರುವ ಕಾಲ್ಪನಿಕವಾದ ಸ್ವದೇಶಸೃಷ್ಟಿಯ ಪರಿಹಾರ ಇದು. ಇದೂ ಕೂಡ, ನನ್ನ ಪ್ರಕಾರ, ಈ ರಾಷ್ಟ್ರಪರಿಕಲ್ಪನೆಯ ಆತಂಕಗಳಿಂದ ಪಾರಾಗುವ ಒಂದು ಕಾವ್ಯಾತ್ಮಕ ಉಪಾಯವೇ ಸರಿ.

ಈ ಲೇಖನದ ಆರಂಭದಲ್ಲಿ ನಾನು ಪ್ರಸ್ತಾಪಿಸಿದ ಆತಂಕಗಳಲ್ಲಿ ಮೂರನೆಯದನ್ನು ಈಗ ಚುಟುಕಾಗಿ ಪ್ರಸ್ತಾಪ ಮಾಡುತ್ತೇನೆ–ಅದು, ಅಸ್ಮಿತೆಯ ಆತಂಕ ಅಥವಾ ಆ್ಯಂಗ್‌ಸೈಟಿ ಆಫ್ ಐಡೆಂಟಿಟಿ. ನಿಜವಾಗಿ, ಇದು ಮೊದಲೆರಡು ಆತಂಕಗಳ ಮೊತ್ತ ಅಥವಾ ಫಲಶ್ರುತಿ. ಕನ್ನಡ ನನ್ನ ನಾಡು, ಅದಕ್ಕೆ ಪರಕೀಯರಿದ್ದಾರೆ, ಆದಕಾರಣವೇ ಅದು ಸ್ವದೇಶ ಎನ್ನುವುದು ಮೊದಲ ಬಗೆಯ ಆತಂಕವಾದರೆ, ಎರಡನೆಯದು ಕನ್ನಡವೆಂಬ ಕಲ್ಪಿತ ಆವರಣದಲ್ಲಿ ಏನೇನನ್ನು ಸೇರಿಸಬೇಕು,ಸೇರಿಸಬಾರದು ಎನ್ನುವ ಪ್ರಶ್ನೆಗೆ ಸಂಬಂಧಿಸಿದ ಆತಂಕ. ಇವೆರಡರ ಫಲವಾಗಿ ಹುಟ್ಟುವ ಮೂರನೆಯ ಆತಂಕ ಅವೆರಡಕ್ಕೂ ಮೂಲವಾದ ಪ್ರಶ್ನೆಗೆ ಬರುತ್ತದೆ ಕನ್ನಡ ಅಂದರೆ ಏನು? ನಾನು ಕನ್ನಡಿಗ ಅಂದ್ರೆ ಏನರ್ಥ? ಮೊದಲಾದ ಪ್ರಶ್ನೆಗಳನ್ನಿದು ಎತ್ತುತ್ತದೆ.

ಇಂಥ ಪ್ರಶ್ನೆಗಳನ್ನು ಬಂಡವಾಳಗಿಟ್ಟುಕೊಂಡು ಇಡಿಯ ಜನವರ್ಗವನ್ನೇ ಸಂಘಟಿಸುವ ಒಂದು ಹೊಸಬಗೆಯ ಸಾಂಸ್ಕೃತಿಕ ರಾಜಕಾರಣ ಇವತ್ತು ಭಾರತದಲ್ಲಿ ಅಷ್ಟೇಕೆ ಇಡಿಯ ಜಗತ್ತಿನಲ್ಲೇ ಮುನ್ನೆಲೆಗೆ ಬರುತ್ತಿರುವುದು ನಮಗೆಲ್ಲ ಪರಿಚಿತವಾದ ಸಂಗತಿ. ಆ ಕ್ಷೇತ್ರದ ಜಿಜ್ಞಾಸೆಗಳಿಗೆ ಹೋಗದೆ. ಆ ರಾಜಕಾರಣದಿಂದ ನಮ್ಮ ಚರ್ಚೆಗೆ

ಅಗತ್ಯವಾದ ಒಂದೇ ಒಂದು ಅಂಶವನ್ನು ನಾನು ಇಲ್ಲಿ ಎತ್ತಿಕೊಳ್ಳುತ್ತೇನೆ. ಈ ಅಸ್ಮಿತೆಯ ರಾಜಕಾರಣವು ಜನಗಳ ಮೇಲೆ ಸೃಷ್ಟಿಸುವ ಒಂದು ಬಹುಮುಖ್ಯವಾದ ಒತ್ತಡವೆಂದರೆ ನಮ್ಮೊಳಗಿರುವ ಹಲವು ಹತ್ತು ನಾನುತನಗಳಲ್ಲಿ ಯಾವುದೋ ಒಂದನ್ನು ಪ್ರಮುಖವೆಂದು ಭಾವಿಸಿ ಅದಕ್ಕೆ ಪ್ರಾಮುಖ್ಯವನ್ನು ಕೊಟ್ಟುಕೊಳ್ಳಬೇಕು ಎಂಬುದು; ಮತ್ತು ಅದೇ ಕಾರಣಕ್ಕೆ ಉಳಿದ ಅಸ್ಮಿತೆಗಳನ್ನು ನಿರಾಕರಿಸುತ್ತ ಹೋಗಬೇಕು ಎಂಬುದು. ಇದು, ನೂರಾರು ವರ್ಷಗಳ ಹಿಂದೆಯೇ ಹಲವಾರು ಕನ್ನಡ ದೇಶಭಕ್ತಿಗೀತೆಗಳಲ್ಲೂ ಕಾಣಿಸಿಕೊಂಡ ಒಂದು ಒತ್ತಡ. ಉದಾಹರಣೆಗೆ ಬೆನಗಲ್ ರಾಮರಾವ್ ಅವರ ಈ ಸಾಲುಗಳನ್ನು ನೋಡಿ:

ಕನ್ನಡವನ್ನುಳಿದೆನಗೆ । ಅನ್ಯ ಜೀವನವಿಲ್ಲ
ಕನ್ನಡವೇ ಎನ್ನುಸಿರು/ ಪೆತ್ತೆನ್ನ ತಾಯಿ
ಕನ್ನಡವೇ ಧನಧಾನ್ಯ/ ಕನ್ನಡವೇ ಮನೆ ಮಾನ್ಯ
ಕನ್ನಡವೇ ಎನಗಾಯ್ತು/ ಕಣ್ಣು ಕಿವಿ ಬಾಯಿ

ಹೊರನೋಟಕ್ಕೆ ಮುಗ್ಧವೂ ನಿರಪಾಯಕರವೂ ಎಂದು ಕಾಣಿಸುವ ಇಂಥ ನಾನುತನದ ನಿರೂಪಣೆಯ ಒಡಲಿನಲ್ಲೇ ಇವತ್ತಿನ ಕನ್ನಡದ 'ಮೂಲಭೂತವಾದ'ದ ಬೀಜ ಇದೆ ಎಂಬುದನ್ನು ನಾವು ಗಮನಿಸಬೇಕು.ಇಂಥದೇ ಮಾತನ್ನು ಇನ್ನೂ ಕೆಲವು ಕವಿಗಳು ಪಾವಿತ್ರ್ಯದ ಪರಿಭಾಷೆಗಳಲ್ಲಿ ನಿರೂಪಿಸಿದ್ದಾರೆ –'ಕನ್ನಡದ ನೆಲದ ಪುಲ್ಲೆನಗೆ ಪಾವನ ತುಳಸಿ/ ಕನ್ನಡದ ನೆಲದ ನೀರ್ವೊನಲೆನಗೆ ದೇವನದಿ/..... ಇನ್ನಾವುದ್ಯೆ ಪೆರತು ಕನ್ನಡದ ಸೇವೆಯಿಂದಧಿಕಮೀ ಜಗದೊಳಗೆ?' ಆದರೆ ಪರಿಭಾಷೆ ಯಾವುದೇ ಇರಲಿ, ನಿಲುವು ಸ್ಪಷ್ಟವಾಗಿಯೇ ಇದೆ–ಕನ್ನಡವನ್ನು ಬಿಟ್ಟು ಉಳಿದೆಲ್ಲ ಅಸ್ಮಿತೆಗಳೂ ಅಮುಖ್ಯ ಎಂಬುದೇ ಆ ನಿಲುವು.

ಇಂಥ ನಿಲುವಿನಲ್ಲಿರುವ ಸಮಸ್ಯೆಗಳು ಈ ಕಾಲದ ಕವಿಗಳ ಅರಿವಿಗೆ ಬಾರದೆ ಏನೂ ಉಳಿಯಲಿಲ್ಲ.ಆದ್ದರಿಂದಲೇ ಅದಕ್ಕೆ ಪ್ರತಿಕ್ರಿಯೆಯೆಂಬಂತೆ ಹಲವು ಕವಿತೆಗಳು ಈ 'ಕನ್ನಡತನ'ವನ್ನು ಇನ್ನಷ್ಟು ವಿಶಾಲವಾದ 'ಆಧ್ಯಾತ್ಮಿಕ' ನೆಲೆಗಳಿಗೆ ಕೊಂಡೊಯ್ಯಲು ಹವಣಿಸಿವೆ. ಉದಾಹರಣೆಗೆ, ಕುವೆಂಪು ಅವರ ಪ್ರಸಿದ್ಧ ಗೀತೆಯೊಂದು 'ಎಲ್ಲಾದರು ಇರು ಎಂತಾದರು ಇರು ಎಂದೆಂದು ನೀ ಕನ್ನಡವಾಗಿರು' ಎನ್ನುವ ಮೂಲಕ ಕನ್ನಡದ ಆಸ್ಮಿತೆಯೆಂಬುದು ಭೌತಿಕವಾಗಿ ಸಾಕ್ಷಾತ್ಕಾರಗೊಳ್ಳಬೇಕಾದ್ದಕ್ಕಿಂತ ಮಿಗಿಲಾಗಿ ಮಾನಸಿಕವಾಗಿ ಸಾಧಿತವಾಗಬೇಕಾದ್ದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ರವೀಂದ್ರನಾಥ ಟಾಗೋರ್ ಅವರು 'ಮೃಣ್ಮಯ' ರಾಷ್ಟ್ರಕ್ಕಿಂತ 'ಚಿನ್ಮಯ' ರಾಷ್ಟ್ರ ಮುಖ್ಯವಾದದ್ದು ಎಂದು ಹೇಳಿರುವುದಕ್ಕೆ ಸಮಾನಾಂತರವಾದದ್ದು ಇದು.

ಈ ಬಗೆಯ ಆಸ್ಮಿತೆಯ ಚರ್ಚೆಗೆ ದ.ರಾ.ಬೇಂದ್ರೆಯವರ 'ನಾನು' ಎಂಬ ಒಂದು ಪದ್ಯ ನೇರವಾಗಿಯೇ ಉತ್ತರಿಸುತ್ತದೆ. 'ನಾನು ಯಾರು?' ಎಂಬ ಒಂದು ಕಲ್ಪಿತ ಪ್ರಶ್ನೆಗೆ ಉತ್ತರವೆಂಬಂತೆ ರಚಿತವಾಗಿರುವ ಈ ಪದ್ಯದ ಸಾಲುಗಳು 'ವಿಶ್ವಮಾತೆಯ ಗರ್ಭಕಮಲಜಾತ ಪರಗಪರಮಾಣುಕೀರ್ತಿ ನಾನು' ಎನ್ನುವ ವರ್ಣನೆಯಿಂದ ಆರಂಭವಾಗಿ, ಆಮೇಲೆ ಕ್ರಮವಾಗಿ ಭೂಮಿತಾಯಿ, ಭಾರತ ತಾಯಿ, ಕನ್ನಡ ತಾಯಿ ಮತ್ತು ಹಡೆದ ತಾಯಿಯರನ್ನೂ ಒಳಗೊಂಡು ವಿಸ್ತರಿಸುತ್ತದೆ; 'ಈ ಐದು ಐದೆಯರೆ

ಪಂಚಪ್ರಾಣಗಳಾಗಿ ಈ ಜೀವದೇಹನಿಹನು' ಎಂಬ ಬಹು ಅಸ್ಮಿತೆಯ ಪ್ರಸ್ತುತಿಯೊಂದಿಗೆ ಮತ್ತು ಅಂಥ ಬಹುತ್ವದ ಅಸ್ಮಿತೆಯು ಅಗತ್ಯ ಮಾತ್ರವಲ್ಲ ಅನಿವಾರ್ಯ ಕೂಡ ಎನ್ನುವ ಸೂಚನೆಯ ಸಮೇತ ಈ ಪದ್ಯ ಮುಗಿಯುತ್ತದೆ.

ಕುವೆಂಪು ಅವರ ಕಾಲಕ್ಕೆ, ಬೇಂದ್ರೆಯವರ ಕಾಲಕ್ಕೆ ಇಂಥ 'ಆಧ್ಯಾತ್ಮಿಕ' ರೂಪದ ಬಹು ಅಸ್ಮಿತೆಗಳ ಆವಾಹನೆಯನ್ನಷ್ಟೇ ನಮ್ಮ ಸಾಮಾಜಿಕ ಜೀವನದ ಆರೋಗ್ಯವನ್ನು ಕಾಪಾಡಿಕೊಳ್ಳಲಿಕ್ಕೆ ಸಾಕಾಗುತ್ತಿತ್ತು. ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಬೇಂದ್ರೆ ಪದ್ಯವು ಉಲ್ಲೇಖಿಸುವ 'ಪಂಚಪ್ರಾಣ'ಗಳ ಜೊತೆಗೆ ಹೇಗೆ 'ಪ್ರಾಣಾಯಾಮ'ವನ್ನು ನಡೆಸಬೇಕು ಎನ್ನುವ ಸಮತೂಕವೊಂದನ್ನು ಆಗಿನ ಕಾಲವು ರೂಢಿಸುವಕೊಂಡಿತ್ತು. ಆದರೆ ಇಪ್ಪತ್ತೊಂದನೆಯ ಶತಮಾನದ ಇವತ್ತಿನ ಸ್ಥಿತಿ ಹಾಗಿಲ್ಲ. ನಮಗೆ ಇವತ್ತು ಮತ್ತೆ ಆ ಸಮತೂಕ ತಪ್ಪುತ್ತಾ ಇದೆ. ಕನ್ನಡ ಪಿತ್ರಾರ್ಜಿತವನ್ನು, ಅಂದರೆ ಕನ್ನಡದೊಳಕ್ಕೂ ಅದರ ಸುತ್ತಲೂ ನಮಗೆ ಅನಾದಿ ಕಾಲದಿಂದ ಒದಗಿ ಬಂದಿರುವ ಬಹುತ್ವಗಳನ್ನು, ಅದದರ ಕಷ್ಟಕೋಟಲೆ ತರಲೆತಾಪತ್ರಯಗಳ ಸಮೇತ ಹೇಗೆ ಇಟ್ಟುಕೊಂಡು ನಿರ್ವಹಿಸಿಕೊಳ್ಳಬೇಕು ಎಂಬುದು ಇವತ್ತು ಬಿಡಿಸಲಾಗದ ಒಂದು ಕಗ್ಗಂಟಿನ ಸಮಸ್ಯೆಯೇ ಆಗಿದೆ; ಮಾತ್ರವಲ್ಲ, ಇದೇ ಇವತ್ತಿನ ನಮ್ಮ ಬಹುತೇಕ ಆತಂಕಗಳಿಗೆ ಮೂಲವೂ ಆಗಿದೆ.

ಅಂಥ ಕ್ಲಿಷ್ಟವಾದ ಸಮಕಾಲೀನ ಆತಂಕದ ಅಭಿವ್ಯಕ್ತಿಗೆ ಇವತ್ತಿನ ಮತ್ತು ಭವಿಷ್ಯದ ಕನ್ನಡ ಕಾವ್ಯ ಯಾವ ಬಗೆಯ ಹೊರದಾರಿಗಳನ್ನು ಹುಡುಕುತ್ತದೆ ಎನ್ನುವುದು ಕಾಲವೇ ನಿರ್ಧರಿಸಬಹುದಾದ ಕಷ್ಟದ ವಿಚಾರ. ಆದ್ದರಿಂದ, ಸದ್ಯಕ್ಕೆ ಆ ಕಷ್ಟವು ಎಷ್ಟು ಕಷ್ಟದ್ದು ಎನ್ನುವುದನ್ನು ಒಂದು ಪದ್ಯದ ಮೂಲಕವೇ ತೋರಿಸುವುದಕ್ಕಾಗಿ, ನಾನು ಎ.ಕೆ. ರಾಮಾನುಜನ್ ಅವರ 'ಪಿತ್ರಾರ್ಜಿತ' ಕವನವನ್ನು ಉಲ್ಲೇಖಿಸಿ, ಅದರೊಂದಿಗೆ ಈ ಲೇಖನವನ್ನು ಮುಗಿಸುತ್ತೇನೆ:

ಸೋಮನಾಥನ ಮೂಗು ಮುರಿದು
ಉತ್ತರದ ಹೆಂಗಸರ ಮೈಯಲ್ಲಿ ತನ್ನ ಪಶ್ಚಿಮರಕ್ತ ಬೆರಸಿ ಹೋದ
ಆ ಘೋರಿಯ ಹೊಟ್ಟೆ ಸೀಳಿ ಕುತುಬ್ ಮೀನಾರು ಮೇಘ
ಮಲ್ಹಾರದ ಸ್ನೇಹಿತರ ಉರ್ದು ಮೊಘಲಾಯ್ ಮಸಾಲೆ.
ಮೊನ್ನೆವರೆಗೂ ಪಂಜಾಬ್‌ಮೇಲಿನಲ್ಲಿ ಅವನು ಕಡಿದ ತಲೆ,
ಲಾಹೋರಿನ ಬಸ್ಸಿನಲ್ಲಿ ಅವನ ಛಿದ್ರ ದೇಹ.
ಚಿಕ್ಕ
ತಾತನಿಗೆ ಮೂರ್ಛೆರೋಗ ಬಡಿದು
ಬೀದಿ ಬಚ್ಚಲು ಆಚೆ ಮೊಹಲ್ಲ ಎನ್ನದೆ ಕಂಡಕಂಡಲ್ಲಿ ಬಿದ್ದು
ಕೈಕಾಲು ಒದರಿ ಹಲ್ಲು ಹಲ್ಲು ಕಡಿದಾಗ
ನಾಲಗೆ ಉಳಿಸಲೆಂದು ಅವರ ಬಾಯಿಗೆ ಕೊಟ್ಟ ಕಬ್ಬಿಣದ ಕೀಲಿ
ಭದ್ರವಾಗಿಡಬೇಕು. ಇಷ್ಟು ಮಕ್ಕಳಿರುವ ಈ ಮನೆಗೆ ಅದು
ಪಿತ್ರಾರ್ಜಿತ.

(ಸಾಭಾರ : ಮಾತುಕತೆ-೮೮)

* * *

ಯಾವುದೇ ಅಧಿಕಾರ ಬಯಸದ ಸ್ವಾತಂತ್ರ್ಯ ಯೋಧರು

– *ಸತ್ಯವ್ರತ*

ರವಿ ಶಂಕರ ವ್ಯಾಸ್ (ಮಹಾರಾಜ್) (೧೮೮೪–೧೯೮೪)

ರವಿ ಶಂಕರ ಮಹಾರಾಜರು ಔಪಚಾರಿಕ ಶಿಕ್ಷಣ ಪಡೆದವರಲ್ಲ. ಮೋಹನ್ ಲಾಲ್ ಪಂಡ್ಯಾರ ಪ್ರಭಾವ ವಲಯದಲ್ಲಿ ಕಾರ್ಯಮಾಡುತ್ತಾ ಅವರಿಗೆ ಅನೇಕ ರಾಷ್ಟ್ರೀಯ ನಾಯಕರ ಸಂಪರ್ಕ ಮತ್ತು ಸಂಬಂಧ ಲಭಿಸಿತು. ೧೯೨೧ ರಲ್ಲಿ ಸರ್ದಾರ ಪಟೇಲರ ನಿಕಟ ಸಂಪರ್ಕ ಬೆಳೆಯಿತು. ಸಂತ–ಬೈರಾಗಿಗಳ ಸರಳತನದ ಜೀವನದೆಡೆ ಆಕರ್ಷಿತರಾದರು, ಪರಿವಾರಿಕ ಜೀವನ ತ್ಯಜಿಸಿದರು. ಮತ್ತು ಸಾರ್ವಜನಿಕ ಸೇವಾ ದೀಕ್ಷೆ ತೊಟ್ಟರು. ಅಹಮ್ಮದಾಬಾದಿನಲ್ಲಿ ರಾಷ್ಟ್ರೀಯ ಶಾಲೆ ಸ್ಥಾಪಿಸಿದರು. ೧೯೨೩ ರಲ್ಲಿ ಸ್ವಯಂ ಸೇವಕರ ಪಡೆಯೊಂದನ್ನು ಕಟ್ಟಿಕೊಂಡು ನಾಗಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಬೋರ್‌ಸದ್ ಸತ್ಯಾಗ್ರಹದಲ್ಲಿ ಬಹು ಪ್ರಮುಖ ಜವಾಬ್ದಾರಿ ನಿರ್ವಹಿಸಿದರು. ಅನಂತರ ಕ್ರಿಮಿನಲ್ ಕಾಡು ಜನಾಂಗದ ಜನರ ಪರಿವರ್ತನೆ ಮತ್ತು ಸುಧಾರಣಾ ಕಾರ್ಯದಲ್ಲಿ ಸಾಕಷ್ಟು ಕಾಲ ತೊಡಗಿದ್ದರು. ೧೯೨೮ ರಲ್ಲಿ ಬಾರ್ಡೋಲಿ ಸತ್ಯಾಗ್ರಹದಲ್ಲೂ ಪ್ರಮುಖ ಪಾತ್ರ ವಹಿಸಿ ದುಡಿದರು. ಉಪ್ಪಿನ ಸತ್ಯಾಗ್ರಹ ಮತ್ತು ೧೯೩೮ ರ ಶುದ್ಧ ಸತ್ಯಾಗ್ರಹಗಳಲ್ಲಿ ಸೆರೆವಾಸ ಅನುಭವಿಸಿದರು. ಗಾಂಧೀಜಿಯ ನಿಧನಾನಂತರ ವಿನೋಬಾಜಿಯ ಭೂದಾನ ಚಳುವಳಿಯಲ್ಲಿ ಶ್ರಮಿಸ ತೊಡಗಿದರು.

ಸ್ವಾಮಿ ಆನಂದ

ಚಿಕ್ಕ ಮಗುವಾಗಿದ್ದಾಗಲೇ ಕೆಲವು ಸಾಧುಗಳಿಂದ ಅಪಹರಿಸಲ್ಪಟ್ಟು ಸನ್ಯಾಸಿಗಳಾದರು. ರಾಮ ಮಿಷನ್ನಿನ ಅನೇಕ ಕೇಂದ್ರಗಳಲ್ಲಿ ಅಭ್ಯಾಸ ಮಾಡಿದರು. ೧೯೦೭ ರಲ್ಲಿ ಬಂಗಾಳದ ಕ್ರಾಂತಿಕಾರಿಗಳ ಅನಂತರ ಮಹಾರಾಷ್ಟ್ರದ ಕ್ರಾಂತಿಕಾರಿಗಳ ಸಂಪರ್ಕದಲ್ಲಿದ್ದರು. ತಿಲಕರ ಕೇಸರಿ ಪತ್ರಿಕೆ, ಮರಾಠಿಯ ತರುಣ ಹಿಂದ್ ಪತ್ರಿಕೆಯಲ್ಲಿ ಕೆಲಸ ಮಾಡಿದರು. ೧೯೧೭ರಲ್ಲಿ ಗಾಂಧೀಜಿಯನ್ನು ಭೇಟಿಯಾದರು. ಅವರ ಆಶ್ರಮ ಸೇರಿದರು. 'ಯಂಗ್ ಇಂಡಿಯಾ' ನವ ಜೀವನ ಪತ್ರಿಕೆಗಳಲ್ಲಿ ಮೊಳೆ ಜೋಡಿಸುವವರಾಗಿ, ಪ್ರೂಫ್ ಓದುವವರಾಗಿ, ಕೊನೆಗೆ ಪ್ರೆಸ್ ಮೇನೇಜರರಾಗಿ ೧೯೧೮ ರಿಂದ ೧೯೨೮ ರವರೆಗೆ ದುಡಿದರು. ಸಾಬರಮತಿ ಆಶ್ರಮದಿಂದ ನಡೆದ ಎಲ್ಲ ಕಾರ್ಯಗಳಲ್ಲೂ ತಪ್ಪದೇ ಭಾಗವಹಿಸಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಸೆರೆಮನೆ ಕಂಡರು. ಠಾಣಾದಲ್ಲಿ ಗಾಂಧಿ ಆಶ್ರಮ ಸ್ಥಾಪಿಸಿದರು. ಸ್ವಲ್ಪ ಕಾಲ ಕೌಶಾನಿಯಲ್ಲಿದ್ದರು. ಬೊಂಬಾಯಿಗೆ ವಾಪಸು ಬಂದರು. ಬೊಂಬಾಯಿಯನ್ನು ದೊಡ್ಡ ವ್ಯಾಪಾರಿ ಕೇಂದ್ರವನ್ನಾಗಿ ಬೆಳೆಸಲು ದುಡಿದ ಮೊದಮೊದಲ ಉದ್ಯೋಗಪರ ಮತ್ತು ವ್ಯಾಪಾರಿಗಳನ್ನು ಕುರಿತು ಆನಂದರು ಅನೇಕ ಪುಸ್ತಕಗಳನ್ನು ಬರೆದರು.

ಶಂಕರಲಾಲ್ ಬ್ಯಾಂಕರ್ (೧೮೮೯-೧೯೮೫)

೧೯೧೧ ಕ್ಕೆ ಭಾರತದಲ್ಲಿ ಓದಿ ಎಂ.ಎ. ಮುಗಿಸಿದ ಮೇಲೆ ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ತೆರಳಿದರು. ಆದರೆ ಯುದ್ಧ ಆರಂಭವಾದುದರಿಂದ ಭಾರತಕ್ಕೆ ಮರಳ ಬೇಕಾಯಿತು. ದಯಾನಂದ, ರಾಮಕೃಷ್ಣ, ವಿವೇಕಾನಂದರಿಂದ ತುಂಬಾ ಪ್ರಭಾವಿತರಾದರು. ೧೯೧೮ರಲ್ಲಿ ಗಾಂಧೀಜಿ ಜೊತೆಗೂಡಿ ಅಹ್ಮದಾಬಾದ್ ಮಿಲ್ ಕಾರ್ಮಿಕರ ಸಂಪಿನ ಉಪಶಮನ ಕಾರ್ಯ ಮಾಡಿದರು, ಗಾಂಧೀಜಿಯ ಅನುಯಾಯಿಗಳಾದರು. ಅಖಿಲ ಭಾರತ ಚರಖಾ ಸಂಘದ ಸಂಸ್ಥಾಪಕ ಸದಸ್ಯರಾದರು. ಖಾದಿ ಕಾರ್ಯದಲ್ಲಿ ನೈಪುಣ್ಯಗಳಿಸಿದರು. ತಮ್ಮ ಜೀವನವನ್ನೇ ಬದಲು ಮಾಡಿಕೊಂಡರು. ೧೯೧೭ ರಲ್ಲಿ ಅನಿಬೆಸೆಂಟರ ಹೋಂರೂಲ್ ಲೀಗ್ ಸೇರಿ ಬೊಂಬಾಯಿ ಶಾಖೆಯ ಜಂಟಿ ಕಾರ್ಯದರ್ಶಿಯಾದರು. ಶಂಕರಲಾಲರ ಕಾರ್ಯಕ್ಷೇತ್ರವೇ ರಚನಾತ್ಮಕ ಕಾರ್ಯ ಮತ್ತು ಕಾರ್ಯಕರ್ತರ ಸಂಘಟನೆ. "ಮಜ್ದೂರ್ ಮಹಾಜನ" ಸಂಘಟನೆಯ ಸಂಸ್ಥಾಪಕರಾದರು. ಅನುಸೂಯಬೆನ್ ಸಾರಾಭಾಯಿಯ ಜೊತೆ ಸೇರಿ ಇದನ್ನು ಕಟ್ಟಿದರು. ನವಜೀವನ ಮತ್ತು ಯಂಗ್ ಇಂಡಿಯಾ ಪತ್ರಿಕೆಗಳಿಗೆ ಬರೆಯುತ್ತಿದ್ದರು. ೧೯೨೨ರಲ್ಲಿ ರಾಜದ್ರೋಹದ ಆಪಾದನೆಯ ಮೇರೆಗೆ ಗಾಂಧಿಯೊಡನೆ ಇವರ ವಿಚಾರಣೆಯೂ ನಡೆದು ೧೩ ತಿಂಗಳ ಸೆರೆವಾಸದ ಶಿಕ್ಷೆಯಾಯಿತು. ಸೆರೆಮನೆಯಲ್ಲಿಯೂ ಗಾಂಧೀಜಿಯ ಜೊತೆಗಿದ್ದರು.

ಜಯಪ್ರಕಾಶ್ ನಾರಾಯಣ (೧೯೦೨-೧೯೭೯)

ಉಚ್ಚ ಶಿಕ್ಷಣ ಮುಗಿಸಿ ೧೯೨೯ರಲ್ಲಿ ಸ್ವದೇಶಾಗಮನ, ವರ್ಧಾದಲ್ಲಿ ಗಾಂಧೀಜಿಯನ್ನು ಮೊದಲ ಬಾರಿ ಕಂಡರು. ಲಾಹೋರ್ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿ ಹಾಜರಾದರು. ಎ.ಐ.ಸಿ.ಸಿ. ಕಾರ್ಯಾಲಯದಲ್ಲಿ ಕಾರ್ಮಿಕ ವಿಭಾಗದ ಮುಖ್ಯಸ್ಥರಾಗಿ ಕಾರ್ಯಾರಂಭ ಮಾಡಿದರು. ೧೯೩೨ ರಲ್ಲಿ ಕಾಂಗ್ರೆಸ್ ಜನರಲ್ ಸೆಕ್ರೆಟರಿಯಾಗಿ ಅಜ್ಞಾತವಾಸದಲ್ಲಿದ್ದೇ ಕಾರ್ಯ ಮಾಡಿದರು. ಬಂಧನಕ್ಕೊಳಗಾಗಿ ಮೊದಲನೇ ಸೆರೆಮನೆವಾಸವಾಯಿತು. ೧೯೩೩ರಲ್ಲಿ ನಾಸಿಕ್ ಜೈಲಿನೊಳಗೆ ಕಾಂಗ್ರೆಸ್ ಸಮಾಜವಾದೀ ಪಕ್ಷದ ಉದಯ, ೧೯೪೦ ರಲ್ಲಿ ಯುದ್ಧ ವಿರೋಧಿ ಭಾಷಣಕ್ಕಾಗಿ ಪುನಃ ಬಂಧನ ೯ ತಿಂಗಳ ಶಿಕ್ಷೆ, ೧೯೪೧ ರಲ್ಲಿ ಪುನ: ಬಂಧನ, ೧೯೪೨, ೮ ನೇ ನವಂಬರ್ ಹಜಾರಿಬಾಗ್ ಜೈಲಿನಿಂದ ಗೋಡೆ ಹಾರಿ ಪರಾರಿ, ೧೯೪೬ ರ ಫೆಬ್ರವರಿಯಲ್ಲಿ ಅಂತಿಮವಾಗಿ ಬಿಡುಗಡೆ, ೧೯೪೭ ರಲ್ಲಿ ಕಾಂಗ್ರೆಸ್ಸಿನಿಂದ ಹೊರ ಬಂದು ಸಮಾಜವಾದಿ ಪಕ್ಷ ರಚನೆ ದೇಶದ ವಿಭಜನೆಯ ವಿರೋಧ ೧೯೪೮ ರಲ್ಲಿ ಮಾರ್ಕ್ಸ್‌ವಾದಿ ನೀತಿ ಶಾಸ್ತ್ರಕ್ಕೆ ತಿಲಾಂಜಲಿ ಇತ್ತು. ಗಾಂಧೀ ವಿಚಾರದ ಸಾಧನ ಶುದ್ಧಿಯ ಸಿದ್ಧಾಂತವನ್ನು ಅಂಗೀಕರಿಸಿದರು. ೧೯೫೦ ರಲ್ಲಿ ಪವನಾರಿನಲ್ಲಿ ಮೊದಲ ಬಾರಿ ವಿನೋಬಾ ಭೇಟಿ. ೧೯೫೨ರಲ್ಲಿ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಪೂರ್ಣವಾಗಿ ತೊರೆದರು. ೧೯೫೩- ನೆಹ್ರೂ-ಜೆ.ಪಿ.ವಾರ್ತಾಲಾಪ ಅಧಿಕಾರ ಹಂಚಿಕೆಯ ವಿಫಲ ಯತ್ನ. ಅದೇ ವರ್ಷ ಚಾಂಡೀಲ ಸರ್ವೋದಯ ಸಮ್ಮೇಳನದಲ್ಲಿ ಭಾಗವಹಿಸಿ

ವಿನೋಬಾರ ಶಿಷ್ಯರಾದರು. ೧೯೫೪ ರಲ್ಲಿ ಬೋಧಗಯೆಯಲ್ಲಿ ಜೀವನ ದಾನದ ಘೋಷಣೆ. ಸಹಸ್ರಾರು ಕಾರ್ಯಕರ್ತರು ಜೀವನದಾನವಿತ್ತರು. ಅದೇ ವರ್ಷ ಸೋಖೋದೇವರಾ ಆಶ್ರಮ ಸ್ಥಾಪನೆ. ೧೯೫೭ ಪಕ್ಷ ರಾಜನೀತಿ ತೊರೆದರು. ೧೯೫೮ ರಲ್ಲಿ ವಿದೇಶಗಳಲ್ಲಿ ಸರ್ವೋದಯ ವಿಚಾರ ಪ್ರಸಾರ. ೧೯೬೦ ರಲ್ಲಿ ವಿಶ್ವ ಶಾಂತಿ ಸೇನೆಯ ಅಧ್ಯಕ್ಷರು. ೧೯೬೧ರಲ್ಲಿ ಸರ್ವೋದಯ ಸಮ್ಮೇಳನಾಧ್ಯಕ್ಷರು, ೧೯೬೪ರಲ್ಲಿ ನಾಗಾಲ್ಯಾಂಡ್ ಶಾಂತಿ ಮಿಶನ್ನಿನ ಕಾರ್ಯ, ೧೯೬೫ ರಲ್ಲಿ ಮ್ಯಾಗ್‌ಸೆಸೆ ಪುರಸ್ಕಾರ, ೧೯೭೧ ರಲ್ಲಿ ಬಾಂಗ್ಲಾದೇಶದ ಪ್ರಶ್ನೆಯ ಸಂಬಂಧ ಮತ್ತೊಮ್ಮೆ ವಿಶ್ವಯಾತ್ರೆ, ೧೯೭೨ ಚಂಬಲ ಕಣಿವೆಯಲ್ಲಿ ಡಕಾಯಿತರ ಪರಿವರ್ತನೆ ಮತ್ತು ಜೆ.ಪಿ. ಸಮ್ಮುಖ ಆತ್ಮ ಸಮರ್ಪಣೆ. ೧೯೭೪ ಬಿಹಾರ ಆಂದೋಳನದ ನೇತೃತ್ವ ಲೋಕನಾಯಕರೆನಿಸಿದರು. ೧೯೭೫ ರ ಜೂನ್ ೨೬ ರಂದು ದೇಶಾದ್ಯಂತ ತುರ್ತು ಪರಿಸ್ಥಿತಿಯ ಘೋಷಣೆ. ಜೆ.ಪಿ. ಬಂಧನ ಮತ್ತು ಚಂಡಿಗಢದಲ್ಲಿ ಏಕಾಂತ ಕಾರಾಗೃಹವಾಸ. ನವೆಂಬರಿನಲ್ಲಿ ಬಿಡುಗಡೆ ಆರೋಗ್ಯ ಕಾರಣಕ್ಕೆ. ಆರೋಗ್ಯ ಕೆಟ್ಟು ಡಯಾಲಿಸಿಸ್ ಅನಿವಾರ್ಯವಾಯಿತು. ೧೯೭೭ರಲ್ಲಿ ಸಾರ್ವತ್ರಿಕ ಚುನಾವಣೆ, ಇಂದಿರಾಜಿ ಸೋಲು, ಜೆ.ಪಿ. ತಮ್ಮ ಕಾರ್ಯಮುಗಿಯಿತು ಎಂದರು. ೧೯೭೯ ಅಕ್ಟೋಬರ್ ೮ ರಂದು ದೇಹ ತ್ಯಾಗ. ನೆಹರು ನಂತರ ಅತ್ಯಂತ ಪ್ರಭಾವಶಾಲಿ ವ್ಯಕ್ತಿ. ಸ್ವಾತಂತ್ರ್ಯ– ಸಮಾನತೆ– ಸೋದರತೆಯ ಆದರ್ಶಗಳಿಗಾಗಿ ಜೀವನ ಪರ್ಯಂತ ಸೆಣಸಿದರು.

ದಾದ ಧರ್ಮಾಧಿಕಾರಿ (೧೮೯೯–೧೯೮೫)

ನಾಗಾಪುರದ ಕಾಲೇಜ್ ಶಿಕ್ಷಣ ತೊರೆದು ಅಸಯೋಗ ಆಂದೋಳನದಲ್ಲಿ ಧುಮುಕಿದರು. ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಣ ಮುಗಿಸಿದರು. ೧೯೩೦, ೧೯೩೨ ಮತ್ತು ೧೯೪೨ ರಲ್ಲಿ ಕಾರಾಗೃಹದ ಶಿಕ್ಷೆ ಅನುಭವಿಸಿದರು. ತಿಲಕ್ ರಾಷ್ಟ್ರೀಯ ಶಾಲೆಯ ಅಧ್ಯಾಪಕರು, ಸರ್ವೋದಯ ಪತ್ರಿಕೆ ಸಂಪಾದಕರು, ಸರ್ವೋದಯ ಆಂದೋಳನದ ಪಂಚ ಮಹಾಪುರುಷರಲ್ಲಿ ಒಬ್ಬರು ಮತ್ತು ತತ್ವವೇತ್ತರು. ಸ್ತ್ರೀ ಪುರುಷ ಸಹಜೀವನವೇ ಮುಂತಾದ ಅನೇಕ ಕೃತಿಗಳ ಲೇಖಕರು.

(ಈ ಸರಣಿ ಮುಗಿಯಿತು)

* * *

ಸಂತಾಪ

ಗಾಂಧೀವಾದಿ, ಹಿರಿಯ ಸ್ವಾತಂತ್ರ ಹೋರಾಟಗಾರ ಕೆ.ಎಸ್.ಸೀತಾರಾಮ ಅಯ್ಯಂಗಾರ್ ಅವರು ಜನವರಿ ೩೦ನೇ ತಾರೀಖು ೮೨ನೇ ವಯಸ್ಸಿನಲ್ಲಿ ನಿಧನರಾದುದಕ್ಕೆ 'ಜನಪದ ವಿಚಾರ'ವು ತನ್ನ ತೀವ್ರ ಸಂತಾಪವನ್ನು ಸೂಚಿಸುತ್ತದೆ.

ಚಿರಸ್ಮರಣೀಯ ಆಚಾರ್ಯ ವಿದ್ವಾನ್ ರಾಮಭದ್ರಾಚಾರ್ಯ

– ಎನ್.ಎನ್.ಚಂದ್ರಶೇಖರ ಭಟ್ಟ

ಯಾ ಗತಿಃ ಸರ್ವಜಂತೂನಾಂ ತಾಂ ಗತಿಂ ತೇ ಪಿತಾ ಗತಃ ಎಂಬ ಮಾತನ್ನು ಉದಾಹರಿಸುತ್ತಾ "ವಯಸ್ಸಾಯಿತು, ಭಗವಂತನು ಕೊಟ್ಟ ಆಯುಸ್ಸನ್ನು ಅವನ ಸೇವೆಗಾಗಿ ವಿನಿಯೋಗಿಸುತ್ತಾ ಇಷ್ಟು ಕಾಲ ಕಳೆದದ್ದಾಯಿತು. ಕೈ ಕಾಲು ಗಟ್ಟಿಯಾಗಿ ಇದ್ದು ನನ್ನ ಕೆಲಸಗಳನ್ನು ನಾನೇ ಮಾಡಿಕೊಳ್ಳುತ್ತಾ ಪರಾವಲಂಬಿಯಾಗದೇ ಒಂದು ದಿನ ಕಣ್ಣು ಮುಚ್ಚಿ ಭಗವಂತನ ಪಾದ ಸೇರಿಕೊಂಡು ಬಿಡಬೇಕು" ಎಂದು ಹೇಳು ಹೇಳುತ್ತಲೇ ಪರಮಪೂಜ್ಯ ಶ್ರೀ ಎನ್.ಎಸ್. ರಾಮಭದ್ರಾಚಾರ್ಯರು ಮಾರ್ಗಶಿರ ಕೃಷ್ಣ ಪ್ರತಿಪತ್ ಶನಿವಾರ ದಿನಾಂಕ ೧೩-೧೨-೨೦೦೮ ರಂದು ಬೆಳಗ್ಗೆ ಇಹಲೋಕವ್ಯಾಪಾರವನ್ನು ಮಂಗಳಗೊಳಿಸಿಕೊಂಡರು.

ವಯಸ್ಸು ಎಂಭತ್ತೆರಡು. ಆದರೆ ಉತ್ಸಾಹ ನವಯುವಕರನ್ನು ಮೀರಿಸುವಂತಹುದು. ನಿತ್ಯಕೃತ್ಯಗಳನ್ನು ಪೂರೈಸಿ ಉಳಿದ ಕಾಲವನ್ನು ಪಾಠ ಪ್ರವಚನ, ಲೇಖನಗಳಲ್ಲೇ ಕಳೆಯುತ್ತಾ ಸಾಂಸಾರಿಕವಾಗಿ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೊಂದಿಗೆ ನಗುನಗುತ್ತ ಎಲ್ಲರಿಗೂ ಮಾರ್ಗದರ್ಶನ ಮಾಡುತ್ತಾ ಸುಖೀ ಜೀವನವನ್ನು ನಡೆಸುತ್ತಲೇ ಜೀವನ್ಮುಕ್ತರಂತೆಯೂ ಇದ್ದರು. ಅವರು ನೀಡಿದ ಪ್ರವಚನಗಳು ಪರಸ್ಸಹಸ್ರ, ಲೇಖನಗಳು ನೂರಾರು, ಪ್ರಕಟಿಸಿದ ಪುಸ್ತಕಗಳು ಹತ್ತಾರು. ವಿದ್ಯಾವ್ಯವಸಾಯ, ಆತ್ಮಸಾಧನೆಗಳೇ ಅವರ ಜೀವನವನ್ನು ತುಂಬಿಕೊಂಡಿದ್ದವು. ಸದಾ ಹಸನ್ಮುಖಿ. ಸರಳ ಜೀವಿ. ಸ್ವಾಭಿಮಾನ ನಿರಾಭಿಮಾನಗಳು ಮೇಳೈಸಿದ ವ್ಯಕ್ತಿತ್ವ ತಾನು ವಿಚಾರ ವಿಮರ್ಶೆ ಮಾಡಿ ನೆಚ್ಚಿಕೊಂಡ ಸಿದ್ಧಾಂತದಿಂದ ದೂರ ಸರಿಯದ ಸ್ವಾಭಿಮಾನ. "ಯುಕ್ತಿ ಯುಕ್ತ ವಚೋ ಗ್ರಾಹ್ಯಂ ಬಾಲಾದಪಿ ಶುಕಾದಪಿ"ಎಂಬಂತೆ ಉತ್ತಮ ವಿಚಾರಗಳು ಎಲ್ಲಿಂದಲೇ ಬಂದರೂ ಸ್ವೀಕರಿಸುವ ನಿರಭಿಮಾನ. ಆದರೆ ದುರಾಭಿಮಾನ ದುರಾಗ್ರಹಗಳು ಅವರಿಂದ ಬಲು ದೂರ. ತನ್ನ ಗುರುವಿನಂತೆ ತಾನೂ ಎಲೆಮರೆಯ ಕಾಯಿಯಂತೆ ಮರೆಯಲಿದ್ದು ಕರ್ತವ್ಯ ಕರ್ಮವನ್ನು ಮಾಡಿ ಮುಗಿಸುವ ನಿರಹಂಭಾವ. ತಾನು ಯಾವುದೇ ಕಾರ್ಯವನ್ನು ಅದು ಪಾಠ ಇರಬಹುದು, ಪ್ರವಚನ ಇರಬಹುದು, ಪುಸ್ತಕ ಪ್ರಕಾಶನ ಇರಬಹುದು ಕೈಗೆತ್ತಿಕೊಂಡರೂ ಅದನ್ನು ಅಚ್ಚುಕಟ್ಟಾಗಿ ತೃಪ್ತಿಕರವಾಗಿ ಪೂರ್ಣಗೊಳಿಸುವ ಕರ್ತೃತ್ವ ಶಕ್ತಿ ಅವರದು.

ಇಂತಹ ಸರಳ ಸಜ್ಜನ ವ್ಯಕ್ತಿಯ ಹಿಂದೆ ಆಡಿದ ಸ್ಫೂರ್ತಿಯ ಸೆಲೆ ಶ್ರೀರಂಗಮಹಾಗುರು. ಶ್ರೀರಂಗಮಹಾಗುರು, ತಮ್ಮ ಧರ್ಮಪತ್ನಿ ವಿಜಯಲಕ್ಷ್ಮೀ ಮಾತೆಯೊಂದಿಗೆ ಅಷ್ಟಾಂಗ ಯೋಗ ವಿಜ್ಞಾನ ಮಂದಿರವೆಂಬ ಅಭೂತಪೂರ್ವ ಮಹಾಸಂಸ್ಥೆಯನ್ನು ಸ್ಥಾಪಿಸಿ ತನ್ಮೂಲಕ ನಾಡಿನ ಸಾವಿರಾರು ಮಂದಿ ಜ್ಞಾನಪಿಪಾಸುಗಳಿಗೆ ಮಾರ್ಗದರ್ಶನ ಮಾಡಿ ಅವರನ್ನು ಆಧ್ಯಾತ್ಮ ಯೋಗಮಾರ್ಗದಲ್ಲಿ ಮುನ್ನಡೆಸುತ್ತಿರುವ ಮಹಾಗುರುಶಕ್ತಿ. ಇವರು ತಮ್ಮ ಪ್ರವಚನಗಳ ಮೂಲಕ

ಜಿಜ್ಞಾಸುಗಳ ಮನಸ್ಸು ಬುದ್ಧಿಗಳಲ್ಲಿರಬಹುದಾದ ಅಜ್ಞಾನಾಂಧಕಾರವನ್ನು ಕಳೆದು ಅವರ ಹೃದಯದಲ್ಲಿ ಜ್ಞಾನದೀವಿಗೆಯನ್ನು ತಮ್ಮ ದೀಕ್ಷಾನುಗ್ರಹದಿಂದ ಹೊತ್ತಿಸಿ ಬೆಳಗಿಸಿದ ಮಹಾ ಪುರುಷರು. ಇಂತಹ ಶ್ರೀರಂಗ ಮಹಾಗುರುವಿನ ವಿಚಾರಧಾರೆಯನ್ನು ಅವರ ಆಶಯದಂತೆ ಲೋಕದಲ್ಲಿ ಪಸರಿಸುವ ಗುರುಕೈಂಕರ್ಯವನ್ನು ಕೊಂಡವರಲ್ಲಿ ಪೂಜ್ಯ ಶ್ರೀರಾಮಭದ್ರಾಚಾರ್ಯರು ಅಗ್ರಗಣ್ಯರು.

ಪ್ರಾಚೀನ ಮತ್ತು ನವೀನನ್ಯಾಯಶಾಸ್ತ್ರಗಳಲ್ಲಿ, ಪೂರ್ವಮೀಮಾಂಸ ಮತ್ತು ಅಲಂಕಾರಶಾಸ್ತ್ರಗಳಲ್ಲಿ ವಿದ್ವತ್‌ಪದವಿಯನ್ನು ಗಳಿಸಿದ್ದ ಇವರು ತಮ್ಮ ತಂದೆಯವರಿಂದಲೇ ವೇದಾಧ್ಯಯನ ಮಾಡಿ ಎಲ್ಲದರಲ್ಲಿಯೂ ತಲಸ್ಪರ್ಶಿಯಾದ ಜ್ಞಾನವನ್ನು ಸಂಪಾದಿಸಿದ್ದರು. ಸರ್ವಕಾರೀಯ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ತರ್ಕಶಾಸ್ತ್ರದ ಉಪಪ್ರಾಧ್ಯಾಪಕರಾಗಿ ಮೂರು ದಶಕಗಳ ಕಾಲ ಶಾಸ್ತ್ರ ಪಾಠ ಮಾಡಿದ ಪೂಜ್ಯ ಎನ್.ಎಸ್.ಆರ್‌ರವರು ನೂರಾರು ವಿದ್ಯಾರ್ಥಿಗಳಿಗೆ ಶಾಸ್ತ್ರದ ಮರ್ಮವನ್ನು ತೆರೆದು ಬೋಧಿಸಿದ್ದಾರೆ. ಜನ್ಮತಃ ಪ್ರತಿಭಾಸಂಪನ್ನರಾದ ಇವರಿಗೆ ಗತಶತಮಾನದ ಐವತ್ತರ ದಶಕದಲ್ಲಿ ಅಷ್ಟಾಂಗಯೋಗ ವಿಜ್ಞಾನಮಂದಿರದ ಸಂಸ್ಥಾಪಕ ಶ್ರೀರಂಗಮಹಾಗುರುಗಳ ಸಂಪರ್ಕವೇರ್ಪಟ್ಟಿತು. ಈ ಸಂಪರ್ಕದ ಮಹಿಮೆಯಿಂದ ಇವರ ಪ್ರತಿಭೆಯು ಪುಟವಿಟ್ಟ ಚಿನ್ನದಂತೆ ಬೆಳಗಲು ಪ್ರಾರಂಭಿಸಿತು. ಸ್ವಯಮಾಚಾರ್ಯಪುರುಷರಾಗಿ ಕುಲಕ್ರಮವಾಗಿ ಬಂದ ಆಚಾರ್ಯಪುಂಸ್ತ್ವವನ್ನು ಗುರುವಿನ ಪದತಲದಲ್ಲಿ ಸಮರ್ಪಿಸಿ ತಾನೊಬ್ಬ ಸಾಮಾನ್ಯ ಗುರು ಸೇವಕನೆಂಬ ನಿರ್ಭರಭಾವದಿಂದ ಕೊನೆಯತನಕವೂ ಗುರುಸೇವೆಯನ್ನು ಅನೇಕ ವಿಧದಿಂದ ನಿರ್ವಹಿಸಿದರು.

ಸಂಸ್ಕೃತ ಕಾಲೇಜಿನಲ್ಲಿ ಅವರ ಸಂಪರ್ಕಕ್ಕೆ ಬಂದ ಹೆಚ್ಚಿನ ವಿದ್ಯಾರ್ಥಿಗಳು ಅವರ ಬೋಧನೆಯ ಪ್ರಭಾವಕ್ಕೆ ಒಳಗಾಗಿ ವಿದ್ಯಾಮರ್ಮವನ್ನು ಅರಿಯುವ ದಿಕ್ಕಿನಲ್ಲಿ ಹೆಜ್ಜೆ ಹಾಕುವ ಪ್ರಯತ್ನ ಮಾಡಿದ್ದಾರೆಂಬುದು ಅವರ ಬೋಧನಾ ವೈಶಿಷ್ಟ್ಯವನ್ನು ಎತ್ತಿಹೇಳುವುದಾಗಿದೆ. ಶಾಸ್ತ್ರ ಸರಣಿ ಎಷ್ಟೇ ಕ್ಲಿಷ್ಟವಾಗಿದ್ದರೂ ಅದನ್ನು ಅಲ್ಲಿಯ ಪದಪುಂಜಗಳ ತಳಹದಿಯ ಮೇಲೆಯೇ ಸರಳವಾಗಿ ವಿವರಿಸಿ ಬೋಧಿಸುವ ಕಲೆ ಅವರಿಗೆ ಕರಗತವಾಗಿತ್ತು. ಶಾಸ್ತ್ರಪಂಕ್ತಿಗಳನ್ನು ಅವರು ವಿವರಿಸುತ್ತಿದ್ದಾಗ ವಿದ್ಯಾರ್ಥಿಗಳಿಗೆ ಅದರ ಅಭಿಪ್ರಾಯ ಅಚ್ಚಳಿಯದಂತೆ ಮನದಟ್ಟಾಗಿ ಬಿಡುತ್ತಿತ್ತು.ಅವರ ಪಾಠ ಎಂದೂ ಶಾಸ್ತ್ರಕಾರರು ಬರೆದ ವ್ಯಾಖ್ಯಾನದ ಮೇಲೆ ಅವಲಂಬಿತವಾಗಿರುತ್ತಿರಲಿಲ್ಲ. ಆದರೆ ಅವರ ಪಾಠದ ಬಳಿಕ ತತ್ಸಂಬಂಧವಾದ ವ್ಯಾಖ್ಯಾನಗಳನ್ನು ಓದಿದರೆ ಅದರ ಸಾರ ತಾನಾಗಿಯೇ ಅರ್ಥವಾಗುತ್ತಿತ್ತು. ಇದು ಅವರ ಬೋಧನಾಶೈಲಿಯಾದರೆ ಈ ಬೋಧನೆ ಇಲ್ಲಿಗೇ ನಿಲ್ಲುತ್ತಿರಲಿಲ್ಲ. ಭಾರತೀಯವಾದ ಯಾವುದೇ ಶಾಸ್ತ್ರವನ್ನು ನೋಡಿದರೂ ಎಲ್ಲದರ ಪ್ರಾರಂಭವೂ "ತತ್ವಜ್ಞಾನಾನ್ನಿಃಶ್ರೇಯಸಾಧಿಗಮಃ" ಎಂದೇ ಇರುತ್ತದೆ. ಏನಿದು ತತ್ವಜ್ಞಾನ? ಇದರಿಂದ ನಿಶ್ರೇಯಸಾಧಿಗಮ ಹೇಗೆ? ಎಂಬ ಜಿಜ್ಞಾಸೆ ತತ್ಪರಿಹಾರದ ಸರಣಿಮರೆಯಾಗಿ ಎಷ್ಟೋ ಕಾಲವಾಗಿರುವಾಗ ಈ ಮರೆಯಾದ ಸರಣಿಯನ್ನು ಶ್ರೀಗುರುವು ತೋರಿದ ದೃಷ್ಟಿಕೋನದ ಹಿನ್ನೆಲೆಯಲ್ಲಿ ತನ್ನ ವಿದ್ಯಾರ್ಥಿಗಳಿಗೆ ಬೋಧಿಸುವ ಪರಿಪಾಠ ಇದಪ್ರಥಮವಾಗಿ ಶಾಸ್ತ್ರಪಾಠಕ್ರಮದಲ್ಲಿ

ಇವರಿಂದ ಸೇರಿಸಲ್ಪಟ್ಟಿತು ಎಂದರೆ ಅತ್ಯುಕ್ತಿಯಾಗದು.

ಇದು ನಮ್ಮ ಪ್ರೀತಿಯ ಮೇಸ್ಟರ ವೃತ್ತಿ ಜೀವನ ವಿಧಾನದ ಸಂಕ್ಷಿಪ್ತ ಚಿತ್ರಣವಾದರೆ ಅವರ ಗೃಹಸ್ಥ ಜೀವನದ ವಿಧಾನವೂ ಆದರ್ಶಮಯವಾದದೇ. ಹಿಂದೆಯೇ ಹೇಳಿದಂತೆ ಶ್ರೀರಂಗಮಹಾಗುರುವಿನ ಅನುಗ್ರಹಾಶೀರ್ವಾದಗಳ ಚೌಕಟ್ಟಿಗೆ ಒಳಪಟ್ಟ ಬಳಿಕ ಕಾಲೇಜಿನ ಅಧ್ಯಾಪನ ಅವಧಿಯನ್ನು ಬಿಟ್ಟು ಉಳಿದ ಸಮಯವೆಲ್ಲವನ್ನೂ ತನ್ನ ಗುರುಕಾರ್ಯಕ್ಕೆ ಮುಡಿಪಾಗಿಟ್ಟವರು. ಗುರುವು ನಿರಂತರವಾಗಿ ನೀಡುತ್ತಿದ್ದ ಪಾಠಪ್ರವಚನಗಳಲ್ಲಿ ಭಾಗವಹಿಸಿ ಗುರುವಿನ ವಿಚಾರ ಸರಣಿಯ ಜಾಡನ್ನು ಹಿಡಿದು ಭಾರತೀಯ ವಿದ್ಯೆ, ಕಲೆ, ಸಂಸ್ಕೃತಿ, ನಾಗರೀಕತೆಗಳ ಬಗ್ಗೆ "ಇದಮಿತ್ಥಂ"ಎಂಬಂತೆ ವಿಚಾರವನ್ನು ಮೂಡಿಸುವ ಗುರುಕಲೆಯನ್ನು ಸ್ವಾಧೀನಪಡಿಸಿಕೊಂಡವರು. ಹೀಗೆ ತಮ್ಮ ಅರಿವಿಗೆ ಬಂದ ವಿಷಯಗಳನ್ನು ಜಿಜ್ಞಾಸುಗಳಿಗೆ ಉಣಬಡಿಸುವ ಕೈಂಕರ್ಯವನ್ನು ಆರು ದಶಕಗಳ ಕಾಲ ನಿರಂತರವಾಗಿ ಮಾಡಿ ತನ್ನ ಚರಮಗೀತೆಯನ್ನು ಹಾಡಿಸಿಕೊಳ್ಳುವ ಹಿಂದಿನ ದಿನ ಅಂದರೆ ಮಾರ್ಗಶಿರ ಶುದ್ಧ ಪೂರ್ಣಿಮಾ ೧೨-೧೨-೨೦೦೮ ರಂದು ಮಧ್ಯಾಹ್ನ ಸನಾತನ ಭಾರತ ಭಾರತೀ ಮಹಾವಿದ್ಯಾಲಯದಲ್ಲಿ ಭಾಗವತ ಪುರಾಣದ ಬಗ್ಗೆ ಅರ್ಧ ಗಂಟೆಯ ಕಾಲ ಸಹೃದಯ ಹೃದಯಗಳಿಗೆ ರಸದೌತಣವೀಯುವಂತೆ ಸುಂದರವಾದ ಪ್ರವಚನವನ್ನು ನೀಡುವ ಮೂಲಕ ತನ್ನ ಸರಸ್ವತೀ ಸೇವೆಗೆ ತನ್ಮೂಲಕ ಗುರುಸೇವೆಗೆ ಮಂಗಳವನ್ನು ಹಾಡಿದರು.

ಮೇಲುಕೋಟೆಯ ಸಂಶೋಧನಸಂಸ್ಥೆಯಲ್ಲಿ ಶ್ರೀಭಾಷ್ಯವನ್ನು ಕುರಿತು ಸಂಸ್ಕೃತದಲ್ಲಿ ರಚಿಸಿದ ಶ್ರೀಭಾಷ್ಯ-ಟಿಪ್ಪಣೀ ನಾಲ್ಕು ಸಂಪುಟಗಳಲ್ಲಿ ಇವರ ಮೊದಲ ಕೃತಿಗಳಾಗಿ ಪ್ರಕಾಶನಗೊಂಡಿತು. ಪ್ರಾರಂಭವಾದ ಗ್ರಂಥ ರಚನಾ ಕಾರ್ಯ ಅನಂತರ ವಿವಿಧವಾಗಿ ಹರಿದು ಬಂದಿತು. ಪ್ರಧಾನವಾಗಿ ಹೇಳಬೇಕೆಂದರೆ ಅಷ್ಟಾಂಗಯೋಗ ವಿಜ್ಞಾನಮಂದಿರದಿಂದ ಪ್ರಕಾಶನಗೊಂಡ"ತತ್ವಾರ್ಥಸಾಹಸ್ರೀ" ಹಾಗೂ "ಶ್ರೀ ಗುರುಹೃದಯ ಮತ್ತು ಆರ್ಷಸಾಹಿತ್ಯ" ಎಂಬ ಎರಡು ಕನ್ನಡಾನುವಾದ ಸಹಿತವಾದ ಸಂಸ್ಕೃತ ಗ್ರಂಥಗಳು ಮತ್ತು "ಉಪನಿಷದ್ಭಾವ ಪ್ರಕಾಶ"ವೆಂಬ ಎಲ್ಲ ದಶೋಪನಿಷತ್ತುಗಳನ್ನೂ ಕುರಿತ ಕಾರಿಕಾ ಗ್ರಂಥ. ಉಪನಿಷತ್ತುಗಳ ಭಾವವನ್ನು ಸಂಸ್ಕೃತ ರೂಪದಲ್ಲಿ ಕಾರಿಕಾರೂಪವಾಗಿ ರಚಿಸಿ ಅದರ ಕನ್ನಡಾನುವಾದವನ್ನು ತಾವೇ ಬರೆದಿದ್ದಾರೆ. ಉಪನಿಷತ್ತುಗಳ ಕಾರಿಕಾ ರಚನೆಯ ಪ್ರಾರಂಭವನ್ನು ಕುರಿತು ಹೀಗೆ ಹೇಳುತ್ತಿದ್ದರು."ಒಂದು ದಿನ ಈಶಾವಾಸ್ಯೋಪನಿಷತ್ತನ್ನು ಓದುತ್ತಾ ಅದರ ಭಾವವನ್ನು ಹಾಗೆಯೇ ಮನಸ್ಸಿನಲ್ಲಿ ಮೆಲುಕು ಹಾಕುತ್ತಿದ್ದೆ. ಆಗ ಆ ಭಾವ ಶ್ಲೋಕರೂಪವಾಗಿ ಮನಸ್ಸಿನಲ್ಲಿ ಮೂರ್ಪಟ್ಟಿತು. ಅದನ್ನು ಹಾಗೆಯೇ ಬರೆಯತೊಡಗಿದೆ. ಹಾಗೆ ಬರೆಯುತ್ತಾ ಬರೆಯುತ್ತಾ ಈ ಉಪನಿಷತ್ತಿನ ಎಲ್ಲ ಮಂತ್ರಗಳ ಭಾವವೂ ಕಾರಿಕಾ ರೂಪವಾಗಿ ಹರಿಯಿತಪ್ಪ" ಎಂದು. ಹೀಗೆ ಮುಂದುವರೆದ ಈ ಕಾರಿಕಾ ರಚನೆ ಎಲ್ಲ ಉಪನಿಷತ್ತುಗಳನ್ನು ಒಳಗೊಂಡಿತು. ಇವರು ರಚಿಸಿದ ಕಾರಿಕೆಗಳ ಸಂಖ್ಯೆಯನ್ನು ಕೂಡಿಸಿದರೆ ವಾಲ್ಮೀಕಿ ರಾಮಾಯಣದ ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳ ಸಂಖ್ಯೆಯ ಸಮೀಪಕ್ಕೆ ಬರಬಹುದು. ಉಪಯುಕ್ತ ಮಂತ್ರಗಳಿಗೆ ಸಂಸ್ಕೃತದಲ್ಲೇ ಅರ್ಥವನ್ನು

ಇವರಿಂದ ಸೇರಿಸಲ್ಪಟ್ಟಿತು ಎಂದರೆ ಅತ್ಯುಕ್ತಿಯಾಗದು.

ಇದು ನಮ್ಮ ಪ್ರೀತಿಯ ಮೇಸ್ಟರ ವೃತ್ತಿ ಜೀವನ ವಿಧಾನದ ಸಂಕ್ಷಿಪ್ತ ಚಿತ್ರಣವಾದರೆ ಅವರ ಗೃಹಸ್ಥ ಜೀವನದ ವಿಧಾನವೂ ಆದರ್ಶಮಯವಾದದ್ದೇ. ಹಿಂದೆಯೇ ಹೇಳಿದಂತೆ ಶ್ರೀರಂಗಮಹಾಗುರುವಿನ ಅನುಗ್ರಹಾಶೀರ್ವಾದಗಳ ಚೌಕಟ್ಟಿಗೆ ಒಳಪಟ್ಟ ಬಳಿಕ ಕಾಲೇಜಿನ ಅಧ್ಯಾಪನ ಅವಧಿಯನ್ನು ಬಿಟ್ಟು ಉಳಿದ ಸಮಯವೆಲ್ಲವನ್ನೂ ತನ್ನ ಗುರುಕಾರ್ಯಕ್ಕೆ ಮುಡಿಪಾಗಿಟ್ಟವರು. ಗುರುವು ನಿರಂತರವಾಗಿ ನೀಡುತ್ತಿದ್ದ ಪಾಠಪ್ರವಚನಗಳಲ್ಲಿ ಭಾಗವಹಿಸಿ ಗುರುವಿನ ವಿಚಾರ ಸರಣಿಯ ಜಾಡನ್ನು ಹಿಡಿದು ಭಾರತೀಯ ವಿದ್ಯೆ, ಕಲೆ, ಸಂಸ್ಕೃತಿ, ನಾಗರೀಕತೆಗಳ ಬಗ್ಗೆ "ಇದಮಿತ್ಥಂ"ಎಂಬಂತೆ ವಿಚಾರವನ್ನು ಮೂಡಿಸುವ ಗುರುಕಲೆಯನ್ನು ಸ್ವಾಧೀನಪಡಿಸಿಕೊಂಡವರು. ಹೀಗೆ ತಮ್ಮ ಅರಿವಿಗೆ ಬಂದ ವಿಷಯಗಳನ್ನು ಜಿಜ್ಞಾಸುಗಳಿಗೆ ಉಣಬಡಿಸುವ ಕೈಂಕರ್ಯವನ್ನು ಆರು ದಶಕಗಳ ಕಾಲ ನಿರಂತರವಾಗಿ ಮಾಡಿ ತನ್ನ ಚರಮಗೀತೆಯನ್ನು ಹಾಡಿಸಿಕೊಳ್ಳುವ ಹಿಂದಿನ ದಿನ ಅಂದರೆ ಮಾರ್ಗಶಿರ ಶುದ್ಧ ಪೂರ್ಣಿಮಾ ೧೨-೧೨-೨೦೦೮ ರಂದು ಮಧ್ಯಾಹ್ನ ಸನಾತನ ಭಾರತ ಭಾರತೀ ಮಹಾವಿದ್ಯಾಲಯದಲ್ಲಿ ಭಾಗವತ ಪುರಾಣದ ಬಗ್ಗೆ ಅರ್ಧ ಗಂಟೆಯ ಕಾಲ ಸಹೃದಯ ಹೃದಯಗಳಿಗೆ ರಸದೌತಣವೀಯುವಂತೆ ಸುಂದರವಾದ ಪ್ರವಚನವನ್ನು ನೀಡುವ ಮೂಲಕ ತನ್ನ ಸರಸ್ವತೀ ಸೇವೆಗೆ ತನ್ಮೂಲಕ ಗುರುಸೇವೆಗೆ ಮಂಗಳವನ್ನು ಹಾಡಿದರು.

ಮೇಲುಕೋಟೆಯ ಸಂಶೋಧನಸಂಸ್ಥೆಯಲ್ಲಿ ಶ್ರೀಭಾಷ್ಯವನ್ನು ಕುರಿತು ಸಂಸ್ಕೃತದಲ್ಲಿ ರಚಿಸಿದ ಶ್ರೀಭಾಷ್ಯ-ಟಿಪ್ಪಣೀ ನಾಲ್ಕು ಸಂಪುಟಗಳಲ್ಲಿ ಇವರ ಮೊದಲ ಕೃತಿಗಳಾಗಿ ಪ್ರಕಾಶನಗೊಂಡಿತು. ಪ್ರಾರಂಭವಾದ ಗ್ರಂಥ ರಚನಾ ಕಾರ್ಯ ಅನಂತರ ವಿವಿಧವಾಗಿ ಹರಿದು ಬಂದಿತು. ಪ್ರಧಾನವಾಗಿ ಹೇಳಬೇಕೆಂದರೆ ಅಷ್ಟಾಂಗಯೋಗ ವಿಜ್ಞಾನಮಂದಿರದಿಂದ ಪ್ರಕಾಶನಗೊಂಡ"ತತ್ವಾರ್ಥಸಾಹಸ್ರೀ" ಹಾಗೂ "ಶ್ರೀ ಗುರುಹೃದಯ ಮತ್ತು ಆರ್ಷಸಾಹಿತ್ಯ" ಎಂಬ ಎರಡು ಕನ್ನಡಾನುವಾದ ಸಹಿತವಾದ ಸಂಸ್ಕೃತ ಗ್ರಂಥಗಳು ಮತ್ತು "ಉಪನಿಷದ್ಭಾವ ಪ್ರಕಾಶ"ವೆಂಬ ಎಲ್ಲ ದಶೋಪನಿಷತ್ತುಗಳನ್ನೂ ಕುರಿತ ಕಾರಿಕಾ ಗ್ರಂಥ. ಉಪನಿಷತ್ತುಗಳ ಭಾವವನ್ನು ಸಂಸ್ಕೃತ ರೂಪದಲ್ಲಿ ಕಾರಿಕಾರೂಪವಾಗಿ ರಚಿಸಿ ಅದರ ಕನ್ನಡಾನುವಾದವನ್ನು ತಾವೇ ಬರೆದಿದ್ದಾರೆ. ಉಪನಿಷತ್ತುಗಳ ಕಾರಿಕಾ ರಚನೆಯ ಪ್ರಾರಂಭವನ್ನು ಕುರಿತು ಹೀಗೆ ಹೇಳುತ್ತಿದ್ದರು."ಒಂದು ದಿನ ಈಶಾವಾಸ್ಯೋಪನಿಷತ್ತನ್ನು ಓದುತ್ತಾ ಅದರ ಭಾವವನ್ನು ಹಾಗೆಯೇ ಮನಸ್ಸಿನಲ್ಲಿ ಮೆಲುಕು ಹಾಕುತ್ತಿದ್ದೆ. ಆಗ ಆ ಭಾವ ಶ್ಲೋಕರೂಪವಾಗಿ ಮನಸ್ಸಿನಲ್ಲಿ ಮಾರ್ಪಟ್ಟಿತು. ಅದನ್ನು ಹಾಗೆಯೇ ಬರೆಯತೊಡಗಿದೆ. ಹಾಗೆ ಬರೆಯುತ್ತಾ ಬರೆಯುತ್ತಾ ಈ ಉಪನಿಷತ್ತಿನ ಎಲ್ಲ ಮಂತ್ರಗಳ ಭಾವವೂ ಕಾರಿಕಾ ರೂಪವಾಗಿ ಹರಿಯಿತಪ್ಪ" ಎಂದು. ಹೀಗೆ ಮುಂದುವರೆದ ಈ ಕಾರಿಕಾ ರಚನೆ ಎಲ್ಲ ಉಪನಿಷತ್ತುಗಳನ್ನು ಒಳಗೊಂಡಿತು. ಇವರು ರಚಿಸಿದ ಕಾರಿಕೆಗಳ ಸಂಖ್ಯೆಯನ್ನು ಕೂಡಿಸಿದರೆ ವಾಲ್ಮೀಕಿ ರಾಮಾಯಣದ ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳ ಸಂಖ್ಯೆಯ ಸಮೀಪಕ್ಕೆ ಬರಬಹುದು. ಉಪಯುಕ್ತ ಮಂತ್ರಗಳಿಗೆ ಸಂಸ್ಕೃತದಲ್ಲೇ ಅರ್ಥವನ್ನು

ಬೋಧಿಸಿ ಅವರ ಪ್ರೀತಿಪೂರ್ವಕವಾದ "ನಮ್ಮ ಆಚಾರ್ಯರು" ಎಂಬ ಸಂಬೋಧನೆಗೆ ಪಾತ್ರರಾದುದು. ಜಗದ್ಗುರು ಪೀಠಾಧಿಪತಿಯಾದ, ಪರಸ್ಸಹಸ್ರ ಶಿಷ್ಯಸಮೂಹವನ್ನು ಹೊಂದಿರುವ, ಎಲ್ಲರ ಗೌರವಕ್ಕೆ ಪಾತ್ರರಾದ ಅಂತಹ ಮಹಾಸ್ವಾಮಿಗಳೊಬ್ಬರು ಇವರನ್ನು ಇಷ್ಟು ಪ್ರೀತಿಯಿಂದ ಯಾವ ಸಂಕೋಚವೂ ಇಲ್ಲದೆ ಜನಸಮೂಹ ಮಧ್ಯದಲ್ಲಿ ಹೀಗೆ ಉತ್ಕೀರ್ತನ ಮಾಡುತ್ತಾರೆಂದರೆ ಅದೊಂದು ಅವಿಸ್ಮರಣೀಯ ಸಂಗತಿಯೇ ಸರಿ. ಗೋಪಿಕೆಯರ ಉಸಿರೇ ಕೃಷ್ಣನಾಗಿದ್ದಂತೆ ತಮ್ಮ ಸಾರ್ಥಕಜೀವಮಾನ ಪೂರ್ತಿ ತಮ್ಮ ಉಸಿರೇ ಆಗಿದ್ದ ಶ್ರೀ ರಂಗಗುರು ದಂಪತಿಗಳಲ್ಲಿ ತಮ್ಮ ಉಸಿರಾಟವನ್ನು ನೆಲೆಗೊಳಿಸಿ ಶ್ರೀ ಪರಮಪೂಜ್ಯ ರಾಮಭದ್ರಾಚಾರ್ಯರು ತಮ್ಮ ಭೌತಶರೀರದ ದರ್ಶನ ಭಾಗ್ಯವನ್ನು ನಮಗೆ ಇಲ್ಲವಾಗಿಸಿದರು. ಅವರ ಜೀವನಜ್ಯೋತಿಯನ್ನು ಆ ಗುರುಪರಂಜ್ಯೋತಿಯು ತನ್ನಲ್ಲಿ ಒಂದಾಗಿಸಿಕೊಳ್ಳಲಿ.

* * *

ಪುಸ್ತಕ ಪರಿಚಯ

ಪುಸ್ತಕದ ಹೆಸರು	:	**ಕೃಷ್ಣ ಸ್ಮರಣ** (ದಿ॥ ಕೆರೆಕೈ ಕೃಷ್ಣ ಭಟ್ಟರ ಸಂಸ್ಮರಣ ಗೌರವ ಗ್ರಂಥ)
ಸಂಪಾದಕರು	:	ಎಸ್.ಪಿ.ಶೆಟ್ಟಿ
ಪ್ರಕಾಶಕರು	:	ದಿ॥ ಕೆರೆಕೈ ಕೃಷ್ಣ ಭಟ್ಟರ ಸಂಸ್ಮರಣ ಸಮಿತಿ,ಶಿರಸಿ.
ಬೆಲೆ ರೂ. ೧೧೦	:	ಪುಟಗಳು– ೨೫೪

ಸಂಸ್ಮರಣ ಗ್ರಂಥಗಳು ಒಂದು ಕಾರಣ, ಒಂದು ಸಂದರ್ಭ, ಒಂದು ವ್ಯಕ್ತಿಯ ನೆನಪು ಇತ್ಯಾದಿ ಕಾರಣಗಳಿಗಾಗಿ ಪ್ರಕಟಗೊಂಡರೂ ಕೆಲವು ಸ್ಮರಣ ಗ್ರಂಥಗಳು ಸಮಯಾತೀತವಾಗಿ ತಾಳುತ್ತವೆ ಮತ್ತು ಬಾಳುತ್ತವೆ. ಇದಕ್ಕೆ ಕಾರಣ ಸ್ಮರಣ ಗ್ರಂಥದಲ್ಲಿಯ ವಿಷಯದ ಹೂರಣ ಮತ್ತು ಆ ಗ್ರಂಥದ ರಚನೆಗೆ ಕಾರಣರಾದ ವ್ಯಕ್ತಿಯ ಬಹುಮುಖ ಸಾಧನೆ.ಈ ಗ್ರಂಥದ ನಾಯಕರಾದ ಕೆರೆಕೈ ಕೃಷ್ಣಭಟ್ಟರು ಸುಮಾರು ಅರ್ಧ ಶತಮಾನ ಕಾಲ ಯಕ್ಷಗಾನ ಕ್ಷೇತ್ರದಲ್ಲಿ ದುಡಿದು ಉತ್ತರ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಕ್ಷೇತ್ರದ ಅಗ್ರಗಣ್ಯರೆನಿಸಿಕೊಂಡಿದ್ದರು. ಆದ್ದರಿಂದ ಅವರ ಕುರಿತಾದ ಈ ಸ್ಮರಣ ಗ್ರಂಥದಲ್ಲಿ ಕೃಷ್ಣಭಟ್ಟರ ವ್ಯಕ್ತಿತ್ವ ಕುರಿತಾದ ಲೇಖನಗಳಲ್ಲದೆ ಯಕ್ಷಗಾನ ಅರ್ಥಗಾರಿಕೆಯಲ್ಲಿ ಅವರು ಸಲ್ಲಿಸಿದ ಸೇವೆಯನ್ನು ತಿಳಿಸುವ ಲೇಖನಗಳೂ ಇವೆ. ತನ್ನಿಮಿತ್ತ ಯಕ್ಷಗಾನ ಮತ್ತು ತಾಳಮದ್ದ ಕಲೆಯಲ್ಲಿ ಜೀವ ಸವೆಸಿದ ಅನೇಕ ಮಹನಿಯರ ಹೆಸರು ದಾಖಲುಗೊಂಡಿವೆ. ಈ ಲೇಖನಗಳು ಯಕ್ಷಗಾನದ ಬಗ್ಗೆ ಒಲವು ಹೊಂದಿ ಆ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಲು ಇಚ್ಛೆ ಇರುವ ಯುವಕರಿಗೆ ಆಕರ ರೂಪದಲ್ಲಿವೆ. ಯಕ್ಷಗಾನ ಕ್ಷೇತ್ರದಲ್ಲಿ ದುಡಿದ ಅನೇಕ ಮಹನಿಯರು ವಿಚಾರಪೂರಿತ ಲೇಖನಗಳನ್ನು ಅರ್ಪಿಸಿ ಕೃಷ್ಣಸ್ಮರಣ ಗ್ರಂಥ ಉಪಯೋಗಿ ಗ್ರಂಥವಾಗಿ ಹೊರಹೊಮ್ಮುವಂತೆ ಮಾಡಿದ್ದಾರೆ.

ಜನಪದ ವ್ಯಕ್ತಿ

ಹರಿಹರೇಶ್ವರ

ಅನೇಕ ಸಾಗರಗಳ ಆಚೆ ಇದ್ದುಕೊಂಡು ಕನ್ನಡದ ಪ್ರೀತಿಗೆ ಪ್ರತ್ಯಕ್ಷ ಉದಾಹರಣೆಯಾದ ವ್ಯಕ್ತಿ ಹರಿಹರೇಶ್ವರ. ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲ ಅಮೇರಿಕಾದಲ್ಲಿ ಇದ್ದು ಅಲ್ಲಿಯ ಕನ್ನಡಿಗರನ್ನು ಭಾಷಾ ಬಾಂಧವ್ಯದ ಆಧಾರದ ಮೇಲೆ ಒಂದುಗೂಡಿಸಿದರು. ಅಮೇರಿಕನ್ ಕನ್ನಡ ಎಂಬ ಹೆಸರಿನಲ್ಲಿ ಕನ್ನಡ ಪತ್ರಿಕೆಯನ್ನು ಪ್ರಾರಂಭಿಸಿದರು. ಆ ಪತ್ರಿಕೆಯ ಮೂಲಕ ಅಮೇರಿಕದಲ್ಲಿದ್ದ ಕನ್ನಡ ಸಾಹಿತಿಗಳನ್ನು ಮತ್ತು ಕಲಾವಿದರನ್ನು ಬೆಳಕಿಗೆ ತರುವುದಲ್ಲದೆ ಅವರು ಕನ್ನಡದ ಬಗ್ಗೆ ಹೆಚ್ಚಿನ ಪ್ರೀತಿ ಬೆಳೆಸಿಕೊಳ್ಳುವಂತೆ ಮಾಡಿದರು. ಹರಿಹರೇಶ್ವರರಿಗೂ ಅಮೇರಿಕನ್ ಕನ್ನಡ ಪತ್ರಿಕೆಗೂ ದಟ್ಟ ರಕ್ತ ಸಂಬಂಧ ಈ ಪತ್ರಿಕೆಯ ಸಲುವಾಗಿ ಒಳ್ಳೆ ಸಂಬಳದ ನೌಕರಿಯನ್ನು ತೊರೆದರು.ಅಷ್ಟೇ ಅಲ್ಲ ಮನೆಯನ್ನು ಮಾರಿದರು.ಉದರ ಪೋಷಣೆ ಮತ್ತು ಪತ್ರಿಕೆಯ ಪೋಷಣೆ ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಪ್ರಸಂಗ ಬಂದಾಗ ಆಗ ಅವರು ಆರಿಸಿಕೊಂಡದ್ದು ಕನ್ನಡದ ಕೆಲಸವನ್ನೇ. ವಿದೇಶದಲ್ಲಿದ್ದುಕೊಂಡು ಕನ್ನಡಕ್ಕಾಗಿ ಯಾರೂ ಮಾಡದೇ ಇದ್ದ ಧೈರ್ಯ ಸಾಹಸವನ್ನು ಮಾಡಿದ ಮೇರು ವ್ಯಕ್ತಿ ಹರಿಹರೇಶ್ವರ ವಿದೇಶಗಳಿಗೆ ಹೋಗಿ ಅಲ್ಲಿ ನೆಲೆಸಿರುವ ಅಸಂಖ್ಯಾತ ಕನ್ನಡಿಗರಿಗೆ ಓರ್ವ ಆದರ್ಶ ಕನ್ನಡಿಗ ಎಂದರೆ ಹರಿಹರೇಶ್ವರ ಎಂದು ಹೇಳುವಷ್ಟರ ಮಟ್ಟಿಗೆ ಸಾಗರದಾಚೆಯ ಕನ್ನಡ ಪ್ರೀತಿಗೆ ಅವರು ದ್ಯೋತಕವಾಗಿದ್ದಾರೆ. ಹರಿಹರೇಶ್ವರರು ಎಂಜನಿಯರಿಂಗ್ ಪದವೀಧರರು. ತಮ್ಮ ಕಾರ್ಯ ನಿಮಿತ್ತ ಅವರು ತಮಿಳುನಾಡು, ಅರುಣಾಚಲ ಪ್ರದೇಶ,ತೆಹರಾನ್ ಮುಂತಾದ ಸ್ಥಳಗಳಲ್ಲಿ ಎಂಜನಿಯರಿಂಗ್ ಕೆಲಸವನ್ನು ನಿರ್ವಹಿಸಿದರು. ಉನ್ನತ ವ್ಯಾಸಾಂಗಕ್ಕಾಗಿ ಅಮೇರಿಕಾಕ್ಕೆ ಹೋಗಿ ಅಲ್ಲಿ ನೆಲೆಸಿದರು. ೨೦೦೨ನೇ ಇಸವಿಯಿಂದ ೨೦೦೬ನೇ ಇಸವಿವರೆಗೆ ವಿಶ್ವ ಕನ್ನಡ ಸಮ್ಮೇಳನಗಳನ್ನು ಅಮೇರಿಕಾದ ವಿವಿಧ ಪಟ್ಟಣಗಳಲ್ಲಿ ಸಂಘಟಿಸಲು ಕಾರಣರಾದರು.ಮುಂದೆ ೨೦೦೬ರಲ್ಲಿ ವಾಷಿಂಗ್‌ಟನ್‌ನಲ್ಲಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು. ಇಂದಿಗೂ ಅಮೇರಿಕಾದಲ್ಲಿ ಪ್ರತಿ ವರ್ಷ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತದೆ. ಸಮ್ಮೇಳನ ನಡೆದಾಗಲೆಲ್ಲ ಹರಿಹರೇಶ್ವರರ ನೆನಪು ಅವರ ಪರಿಚಯ ಇದ್ದವರೆಗೆ ಬಾರದೇ ಇರುವುದಿಲ್ಲ. ಕೇವಲ ಅಮೇರಿಕನ್ ಕನ್ನಡ ಪತ್ರಿಕೆ ಸಂಪಾದಕರಾಗಿ ಮತ್ತು ವಿಶ್ವ ಕನ್ನಡ ಸಮ್ಮೇಳನಗಳ ಸಂಘಟಿತರಾಗಿ ಕೆಲಸ ಮಾಡದೆ ಸ್ವತಃ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ.ಈಗ ಮೈಸೂರಿನಲ್ಲಿ ಪತ್ನಿ ನಾಗಲಕ್ಷ್ಮಿಯವರೊಂದಿಗೆ ನೆಲೆಸಿರುವ ಹರಿಹರೇಶ್ವರರು ಮೈಸೂರು ನಗರದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕ್ಷೇತ್ರವನ್ನು ಸಕ್ರಿಯವಾಗಿಟ್ಟಿದ್ದಾರೆ.

"ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು" ಎನ್ನುವ ವರ ಕವಿ ಕುವೆಂಪುರವರ ಮಾತನ್ನು ಅಕ್ಷರಶಃ ಪಾಲಿಸಿರುವ ಹರಿಹರೇಶ್ವರರು ಕನ್ನಡಿಗರ ಓರ್ವ ಆದರ್ಶ ವ್ಯಕ್ತಿ.

– ಕೆ.ಆರ್. ಮೋಹನ್

* * *

ವೇದದಲ್ಲಿಯ ಮುತ್ತುಗಳು

– ವಿನೋಬಾ

ನಾಋತೆ ಶಾಂತಸ್ಯ ಸಖ್ಯಾಯ್ಯದೇವಾ :–

ಶ್ರಮ ಮಾಡಿದ ಮನುಷ್ಯ ಶಾಂತನಾದಾಗ, ಧಣಿವಾಗುತ್ತದೆ. ಆಗ ದೇವತೆಗಳು ಅವನಿಗೆ ನೆರವಾಗುತ್ತಾರೆ. ಆಲಸಿಯಾಗಿರುವ, ವ್ಯಸನಿಯಾಗಿರುವ ಜನರಿಗೆ ಪರಮೇಶ್ವರನೂ ನೆರವಾಗುವುದಿಲ್ಲ.

ತುಕಾರಾಂ ಕೂಡ ಹೀಗೆ ಹೇಳುತ್ತಾರೆ "ತಟಸ್ಥ ತೇಧ್ಯಾನ ಉಭೆವಿಟೆವರಿ" ಇಟ್ಟಿಗೆಯ ಮೇಲೆ ನಿಂತುಕೊಂಡು ವಿಠೊಬಾ ಹೇಳುತ್ತಾರೆ "ಈ ನದಿ ನೋಡು. ನದಿಯ ಆಳ ಸೊಂಟದವರೆಗೆ ಮಾತ್ರ ಇದೆ. ಪರಮಾತ್ಮ ಕೈ ಹಿಡಿದು ದಾಟಿಸುವುದಿಲ್ಲ" ಭಗವಂತನ ಬಳಿ ಮೋಕ್ಷದ ಗಂಟು ತುಂಬಿಲ್ಲ. ಅವನು ಅದನ್ನು ನಿಮ್ಮ ಕೈಗೆ ಕೊಡುವಷ್ಟು ಅದು ತುಂಬಿಲ್ಲ. ಅದಕ್ಕಾಗಿ ನೀವು ಶ್ರಮಪಟ್ಟು ದಣಿಯಬೇಕು. ಅದನ್ನು ಪೂರ್ಣವಾಗಿ ಉಪಯೋಗಿಸದೆ ಇದ್ದರೆ ಅವನು ನಿಮ್ಮ ಸಹಾಯಕ್ಕಾಗಿ ಎಂದಿಗೂ ಬರುವುದಿಲ್ಲ.

ಶ್ರಮದಲ್ಲಿ ನಮ್ಮೆಲ್ಲರ ಕೈ ಜೊತೆಗೊಡುವುದಿಲ್ಲ ಅಂದ ಮೇಲೆ ಭಗವಂತ ತನ್ನ ಬೆರಳನ್ನು ಯಾಕೆ ಜೋಡಿಸುವನು. ಭಕ್ತ ಶ್ರಮ ಮಾಡಿ ದಣಿಯದೇ ಇದ್ದಲ್ಲಿ ಭಗವಂತ ಅವನ ಸಹಾಯ ಮಾಡುವುದಿಲ್ಲವೆಂಬ ಅವನ ರೀತಿ ಪ್ರಸಿದ್ಧವೇ ಇದೆ. ಆದ್ದರಿಂದ ನಮ್ರತೆಯಿಂದ ಕೆಲಸದಲ್ಲಿ ತೊಡಕಬೇಕು, ಧೃಢ ನಿಶ್ಚಯವಿರಬೇಕು, ಸಾತತ್ಯ ಉಳಿಸಿಕೊಳ್ಳಬೇಕು, ಯಾರ ಮನಸ್ಸನ್ನು ದುಃಖಿಸಬಾರದು ಮತ್ತು ಪುಕ್ಕಟೆಯ ಯಶಸ್ಸನ್ನು ಗಳಿಸಬಾರದು.

ಯೋಜಾಗರ

ಭಾರತದಲ್ಲಿ ವಿದ್ಯೆಯ ಅಧ್ಯಯನ ಪ್ರಾಚೀನಕಾಲದಿಂದಲೂ ನಡೆಯುತ್ತಿದೆ. ವಿದ್ಯಾರ್ಥಿಗಳು ಉಷಃ ಕಾಲದಲ್ಲಿ ತನ್ನ ಗುರು ಬಳಿ ಅಧ್ಯಯನ ಮಾಡುತ್ತಿದ್ದರು. ಅವರು ಬಹಳ ಬೇಗನೆ ಎದ್ದೇಳುತ್ತಿದ್ದರು. ಮತ್ತು ಸ್ವಲ್ಪ ಚಿಂತನ ಮನನ ಕೂಡ ಮಾಡುತ್ತಿದ್ದರು. ಪ್ರಾತಃ ಕಾಲದ ಸಮಯ ಯಾರು ಮಲಗಿರುತ್ತಾರೋ ಅವರು ತಮ್ಮ ಅಮೂಲ್ಯ ಸಮಯವನ್ನು ಕಳೆದುಕೊಳ್ಳುತ್ತಾರೆ. ಬೆಳಿಗ್ಗೆ ಬೇಗ ಏಳುವುದರಿಂದ ಬುದ್ಧಿ ಜಾಗೃತವಾಗಿರುತ್ತದೆ, ತೇಜವಾಗಿರುತ್ತದೆ.:–

ಯೋಜಾಗರ ತಮೃಚಃ ಕಾಮಯಂತೆ ಯೋಜಾಗರ ತಮು ಸಾಮಾನಿಯಂತಿ:

ಯಾರು ಜಾಗೃತರಾಗಿರುತ್ತಾರೋ ಅವರನ್ನು ಭಗವಂತ ಸ್ಮರಿಸುತ್ತಾನೆ. ಋಚುಗಳು ಅವನಿಗೆ ಸ್ವಂತವಾಗುತ್ತವೆ. ಸಾಮವೇದವು ಕೂಡ ಅವನ ಬಳಿಗೆ ಹೋಗುವವು. ಯಾರು ಜಾಗೃತರಾಗಿರುತ್ತಾರೋ ವೇದಗಳು ಅವನನ್ನು ಪ್ರೇಮಿಸುತ್ತವೆ. ಅವನ ಭೇಟಿಗಾಗಿ ಬರುತ್ತವೆ. ಅರ್ಥಾತ್ ಯಾರು ಜಾಗೃತರೋ ಅವರ ಬಳಿ ವೇದನಾರಾಯಣ ಬರುತ್ತಾರೆ. ಅವರ ಬಳಿ ಜ್ಞಾನ ಬರುತ್ತದೆ. ಭಕ್ತಿ ಬರುತ್ತದೆ.

* * *

ಜನಪದ ಸೇವಾಟ್ರಸ್ಟ್ ಸಮಾಚಾರ

ಫೆಬ್ರವರಿ ೧೮ ರಂದು ಟ್ರಸ್ಟಿನ ಕಾರ್ಯಕಾರಿ ಸಮಿತಿ ಸಭೆ ನಡೆಯಿತು. ಈ ಸಭೆಯಲ್ಲಿ ೨೦೦೮ ನವೆಂಬರ್,ಡಿಸೆಂಬರ್ ಮತ್ತು ೨೦೦೯ ಜನವರಿ ಮಾಹೆಯ ಜಮಾ ಖರ್ಚನ್ನು ಮತ್ತು ಕಾರ್ಯ ವರದಿಯನ್ನು ಮಂಡಿಸಿ ಅಂಗೀಕಾರ ಪಡೆಯಲಾಯಿತು.ಅಲ್ಲದೆ ಖಾದಿ ಉದ್ಯಮದಲ್ಲಿ ತೊಡಗಿರುವವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದಕ್ಕಾಗಿ ಮತ್ತು ಇನ್ನೂ ಹೆಚ್ಚಿನ ಕೆಲಸಗಾರರನ್ನು ಆಕರ್ಷಿಸುವುದಕ್ಕಾಗಿ ಅವರೆಲ್ಲರಿಗೆ ಮಾಹೆಯಾನ ೩೦೦ ರೂಪಾಯಿಗಳ ಆರ್.ಡಿ. ಯೋಜನೆಯನ್ನು ಕೈಗೊಳ್ಳಲು ತೀರ್ಮಾನಿಸಲಾಯಿತು. ಈ ಯೋಜನೆಯು ಖಾದಿ ಮಂಡಳಿಯ ವಾಡಿಕೆಯ ಕ್ಷೇಮನಿಧಿ ಯೋಜನೆಗೆ ಸಮಾನಾಂತರವಾಗಿ ಕಾರ್ಯಗತಗೊಳ್ಳುವುದು. ಖಾದಿ ಸಿದ್ಧ ಉಡುಪುಗಳ ತಯಾರಿಕಾ ತರಬೇತಿ ಕಾರ್ಯಕ್ರಮ ಕಳೆದ ಜನವರಿ ಒಂದರಿಂದ ನಡೆದುಕೊಂಡು ಬರುತ್ತಿದೆ. ಹತ್ತು ಜನ ಮಹಿಳೆಯರು ಈ ತರಬೇತಿ ಪಡೆಯುತ್ತಿದ್ದಾರೆ. ಮಾರ್ಚ್ ತಿಂಗಳ ಕೊನೆಯ ವೇಳೆಗೆ ಸಿದ್ಧ ಉಡುಪುಗಳು ತಯಾರಾಗಿ ಮಾರುಕಟ್ಟೆಗೆ ಬರುವ ನಿರೀಕ್ಷೆಯಿದೆ. ಸ್ಥಳೀಯ ಶಾಲಾ ಮಕ್ಕಳಿಗೆ ಕಥೆ ಹೇಳುವ ಕಾರ್ಯಕ್ರಮ ಕಳೆದ ಜನವರಿಯಲ್ಲಿ ಪ್ರಾರಂಭವಾದದ್ದು ತಪ್ಪದೇ ನಡೆದುಕೊಂಡು ಬರುತ್ತಿದೆ. ಇದುವರೆಗೆ ಆರು ಕಥಾ ಕಾರ್ಯಕ್ರಮ ನಡೆದಿದೆ. ಈ ಕಾರ್ಯಕ್ರಮದಲ್ಲಿ ಸರಾಸರಿ ೩೦ ಮಕ್ಕಳು ಭಾಗವಹಿಸುತ್ತಾರೆ. ಮುಂದಿನ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಈ ಕಾರ್ಯಕ್ರಮವನ್ನು ಇನ್ನಷ್ಟು ಆಕರ್ಷಕವಾಗಿ ಮತ್ತು ಮೌಲ್ಯ ಉಳ್ಳದ್ದಾಗಿ ಮಾಡಲು ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಟ್ರಸ್ಟಿನ ಎಂದಿನ ಕಾರ್ಯಕ್ರಮಗಳಾದ ಹಿರಿಯ ನಾಗರೀಕರ ಬಳಗದ ಸಭೆಗಳು ಮತ್ತು ಸರ್ವೋದಯ ಪಾತ್ರೆ ವಿತರಣಾ ಕಾರ್ಯಕ್ರಮ ಹಾಗೂ ಶಿಶು ವಿಹಾರ ಯಶಸ್ವಿಯಾಗಿ ನಡೆದವು.


ಮೈಸೂರಿನಿಂದ ನಾಗರಾಜ್ ಜೋಯಿಷ್ ಮತ್ತು ಪಿ.ಎಸ್. ಬಾಲಕೃಷ್ಣನ್ ಹಾಗೂ ಅವರ ಕುಟುಂಬ ವರ್ಗದವರು ಟ್ರಸ್ಟಿಗೆ ಭೇಟಿಕೊಟ್ಟರು. ಮತ್ತು ಸಂಸ್ಥೆಯ ಉಪಯೋಗಕ್ಕಾಗಿ ರಗ್‌ಗಳನ್ನು ದಾನವಾಗಿ ಕೊಟ್ಟರು. ಬೆಂಗಳೂರಿನ ಟ್ರಸ್ಟಿನ ಅಭಿಮಾನಿಗಳಾದ ರಾಮಚಂದ್ರ ಮತ್ತು ಅವರ ಪುತ್ರ ರಘುನಂದನ್ ಟ್ರಸ್ಟಿಗೆ ಭೇಟಿಕೊಟ್ಟರು. ಟ್ರಸ್ಟಿನ ಹಳೆಯ ವಿದ್ಯಾರ್ಥಿನಿ ಸರಸ್ವತಿ ಹಾಗೂ ಅವರ ಸಾಕು ಮಗ ಟ್ರಸ್ಟಿಗೆ ಭೇಟಿಕೊಟ್ಟರು. ಟ್ರಸ್ಟಿನ ಅಧ್ಯಕ್ಷರು ಮತ್ತು ಧರ್ಮದರ್ಶಿ ಸಂತೋಷ್‌ರವರು ವಿವಿಧ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸಿದರು.

೨೦೦೯ ಫೆಬ್ರವರಿ ಮಾಹೆಯ ದಾನಿಗಳು

ಶ್ರೀ.ಕೆ.ರಮೇಶ್‌ರಾವ್, ಮಂಗಳೂರು; ಶ್ರೀ.ಎಂ.ಕೆ.ಸುಬ್ಬರಾವ್;
ಎಂ.ಸಿ.ಕೆ.ಎಸ್ ಟ್ರಸ್ಟ್ ; ಶ್ರೀ ಆರ್.ರಘುನಂದನ್; ಶ್ರೀ ಸುನಿಲ್;
ಶ್ರೀಎಂ.ಆರ್.ಕೃಷ್ಣ- ಬೆಂಗಳೂರು; ಶ್ರೀ ಎಂ.ಎಸ್.ವಿಶ್ವನಾಥ, ಹಾಸನ;
ಶ್ರೀ ಕೃಷ್ಣ-ರಾಮನಾಥಪುರ ಶ್ರೀಮತಿ-ಮೇಲುಕೋಟೆ ಮತ್ತು ಸಂಸ್ಥೆಯ
ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೬೪

– ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್‌ನ್ನು ಸ್ಥಾಪಿಸಿದಾಗಿನಿಂದಲೂ ಮೇಲುಕೋಟೆಯಿಂದ ಹೊರ ಹೋಗುವುದು ಅಪರೂಪದ ಸಂಗತಿಯಾಯಿತು. ಅಲ್ಲದೆ, ಎಲ್ಲ ಪ್ರಕಾರದ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ್ರಗಳಾದ ಬೆಂಗಳೂರು ಮತ್ತು ಮೈಸೂರು ಮೇಲುಕೋಟೆಯಿಂದ ದೂರ.ಅರವತ್ತು ವರ್ಷಗಳ ಹಿಂದೆ ಸಾರಿಗೆ ಸಂಚಾರದ ವ್ಯವಸ್ಥೆ ತುಂಬ ಕಷ್ಟಕರವಾಗಿತ್ತು. ಇದೂ ಅಲ್ಲದೆ,ಬೆಂಗಳೂರು ಮತ್ತು ಮೈಸೂರಿಗೆ ಹೋದರೆ ಅಲ್ಲಿ ವಾಸದ ಸಮಸ್ಯೆಯೂ ಇತ್ತು. ಹೀಗಾಗಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಸಮಾನ ಆಸಕ್ತಿಯ ಸಾರ್ವಜನಿಕ ಚಟುವಟಿಕೆಗಳು ನಡೆದರೂ ಅವುಗಳಲ್ಲಿ ಭಾಗವಹಿಸುವುದು ಕಷ್ಟವಾಗುತ್ತಿತ್ತು. ಆ ನಗರಗಳಲ್ಲಿದ್ದ ಕ್ರಿಯಾಶೀಲ ಕಾರ್ಯಕರ್ತರಿಗೆ ನನ್ನ ಆಸಕ್ತಿಗಳು ಗೊತ್ತಿದ್ದರು ಅವರು ಸಹ ನನ್ನನ್ನು ಮರೆತು ಬಿಡುವುದು ಸಹಜವೇ ಆಗಿತ್ತು. ಅವರಿಗೂ ಭೌಗೋಳಿಕ ದೂರ ಮತ್ತು ಸಾರಿಗೆ ವ್ಯವಸ್ಥೆಯಲ್ಲಿಯ ತೊಡಕುಗಳು ಗೊತ್ತಿದ್ದವು.

ಈ ಕಾರಣದಿಂದ ೧೯೭೫ ರಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾದಾಗ ಅದರ ವಿರುದ್ಧ ನಡೆದ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ತುರ್ತುಪರಿಸ್ಥಿತಿ ವಿರೋದಿ ಚಳುವಳಿಯಲ್ಲಿ ಹೆಚ್ಚಾಗಿ ನಗರ ಕೇಂದ್ರಿತವಾಗಿತ್ತು. ಗ್ರಾಮಾಂತರ ಪ್ರದೇಶದಲ್ಲಿ ಅದರ ಬಿಸಿ ಅಷ್ಟಾಗಿ ತಾಗಿರಲಿಲ್ಲ. ಆದರೂ ಕೂಡ ಇದ್ದ ಪರಿಸ್ಥಿತಿಯಲ್ಲಿಯೇ ಸಾಧ್ಯವಾದಷ್ಟು ತುರ್ತುಪರಿಸ್ಥಿತಿ ವಿರುದ್ಧ ಕೆಲಸ ಮಾಡಿದ್ದುಂಟು. ಇದರಲ್ಲಿ ಮುಖ್ಯವಾಗಿ ಆಗಿದ್ದ ಟ್ರಸ್ಟಿನ ಮುದ್ರಣಾಲಯದಲ್ಲಿ ಕೆಲವು ಹಸ್ತ ಪತ್ರಿಕೆಗಳನ್ನು ಮುದ್ರಿಸಿ ಹಂಚಿದ್ದು, ಆ ಹಸ್ತ ಪತ್ರಿಕೆಗಳಲ್ಲಿ ತುರ್ತುಪರಿಸ್ಥಿತಿಯ ವಿಕೋಪ, ಜಯಪ್ರಕಾಶ್ ನಾರಾಯಣರ ವಿಚಾರ, ಸಂಪೂರ್ಣ ಕ್ರಾಂತಿಯ ಅಗತ್ಯ ಮುಂತಾದ ವಿಚಾರಗಳು ಸಂಕ್ಷಿಪ್ತವಾಗಿ ಬರೆಯಲಾಗಿರುತ್ತಿತ್ತು. ನನಗೆ ಬರುವ ಅಂಚೆಯನ್ನು ಸೆನ್ಸಾರ್ ಮಾಡಲಾಗುತ್ತಿತ್ತು. ಅಲ್ಲದೆ, ಊರು ಬಿಟ್ಟು ಹೋಗುವ ಮುನ್ನ ಸ್ಥಳೀಯ ಪೋಲಿಸ್ ಠಾಣೆಗೆ ತಿಳಿಸಬೇಕೆಂಬ ಸೂಚನೆಯೂ ಇತ್ತು.

ಈ ಕೆಲಸವಲ್ಲದೆ ಕೆಲ ಭೂಗತ ಸಂಘಟನೆಗಳು ವಿವಿಧ ಹೆಸರುಗಳಲ್ಲಿಮುದ್ರಿಸುತ್ತಿದ್ದ ಪತ್ರಿಕೆಗಳನ್ನು ಸಂಬಂಧಿಸಿದ ಕಾರ್ಯಕರ್ತರಿಗೆ ಗುಟ್ಟಾಗಿ ವರ್ಗಾಹಿಸುವುದು ಸಹ ಒಂದು ಕೆಲಸವಾಗಿತ್ತು.ಟ್ರಸ್ಟಿನ ಮುಖಪತ್ರಿಕೆಯಾಗಿದ್ದ ಜನಪದ ವಿಚಾರದಲ್ಲಿ ತುರ್ತುಪರಿಸ್ಥಿತಿಯ ವಿರೋಧವಾಗಿ ಲೇಖನಗಳನ್ನು ಬರೆಯಲಾಯಿತು. ತುರ್ತುಪರಿಸ್ಥಿತಿಯ ಕಾಲದಲ್ಲಿ ಮಂಡ್ಯಜಿಲ್ಲೆಯ ಪೋಲಿಸ್ ವರಿಷ್ಠ ಅಧಿಕಾರಿಯಾಗಿ

ಸಾಂಗ್ಲಿಯಾನ ಇದ್ದರು. ಒಂದು ಸಲ ವೈರಮುಡಿ ಜಾತ್ರೆಯ ಸಮಯದಲ್ಲಿ ಅವರಿಗೆ ಊಟದ ವ್ಯವಸ್ಥೆಯನ್ನು ಸ್ಥಳೀಯ ಪೋಲಿಸ್ ಅಧಿಕಾರಿಗಳು ನಮ್ಮ ಮನೆಯಲ್ಲಿಯೇ ಮಾಡಿಸಿದ್ದರು. ಆಗ ಸಾಂಗ್ಲಿಯಾನರ ನಿಕಟ ಪರಿಚಯವಾಯಿತು. ಮಾತುಕತೆಯ ಸಂದರ್ಭದಲ್ಲಿ ಅವರು ಆಂತರಿಕವಾಗಿ ತುರ್ತುಪರಿಸ್ಥಿತಿಯ ವಿರೋಧಿಗಳಾಗಿರುವರೆಂದು ಅನಿಸಿತು. ಜೆ.ಪಿ.ಯವರಿಗೂ, ನನಗೂ ನಿಕಟ ಸಂಪರ್ಕವಿತ್ತೆಂದು ಅವರು ತಿಳಿದ ಮೇಲೆ,ಅವರು ಮೇಲುಕೋಟೆಗೆ ಬಂದಾಗಲೆಲ್ಲ ನನ್ನನ್ನು ಪ್ರವಾಸಿ ಮಂದಿರಕ್ಕೆ ಕರೆಸಿಕೊಂಡು ಪ್ರಚಲಿತ ರಾಜಕೀಯ ಬೆಳವಣಿಗೆಗಳ ಬಗ್ಗೆ ನನ್ನೊಂದಿಗೆ ವಿಚಾರ ವಿನಿಮಯ ಮಾಡುತ್ತಿದ್ದರು. ನನ್ನೊಂದಿಗಾದ ಅವರ ಪರಿಚಯದ ಪರಿಣಾಮವಾಗಿ ತುರ್ತುಪರಿಸ್ಥಿತಿಯ ಕೆಲ ನಿಯಮಗಳು ನನ್ನ ಮಟ್ಟಿಗೆ ಸ್ವಲ್ಪ ಸಡಿಲಗೊಂಡವು.

(ಮುಂದುವರೆಯುವುದು. . .)

* * *

ಪತ್ರಿಕೆಯ ಒಡೆತನ ಮತ್ತು ಇತರ ವಿವರಗಳ ಪ್ರಕಟಣೆ

ಪ್ರಾರೂಪ ೪ [ವಿಧಿ–೮]

೧)	ಪ್ರಕಟಣೆಯ ಸ್ಥಳ	: ಮೇಲುಕೋಟೆ
೨)	ಪ್ರಕಟಣೆಯ ನಿಯತಕಾಲಿಕತೆ	: ತಿಂಗಳಿಗೊಮ್ಮೆ
೩)	ಮುದ್ರಕರ ಹೆಸರು	: ಸಂಕೇತ್ ಮುದ್ರಣ
	ಭಾರತದ ಪ್ರಜೆಯೇ?	: ಹೌದು
	ವಿಳಾಸ	: ಸಂಕೇತ್ ಮುದ್ರಣ ಕಲ್ಯಾಣಿ ಬೀದಿ, ಮೇಲುಕೋಟೆ
೪)	ಪ್ರಕಾಶಕರ ಹೆಸರು	: ಸುರೇಂದ್ರ ಕೌಲಗಿ
	ಭಾರತದ ಪ್ರಜೆಯೇ?	: ಹೌದು
	ವಿಳಾಸ	: ಕಲ್ಯಾಣಿ ಬೀದಿ, ಮೇಲುಕೋಟೆ
೫)	ಗೌ॥ ಪ್ರಧಾನ ಸಂಪಾದಕರ ಹೆಸರು	: ಸುರೇಂದ್ರ ಕೌಲಗಿ
	ಭಾರತದ ಪ್ರಜೆಯೇ?	: ಹೌದು
	ವಿಳಾಸ	: ಕಲ್ಯಾಣಿ ಬೀದಿ, ಮೇಲುಕೋಟೆ

೬) ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಗಳ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳದ ಶೇ. ೧ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರಾದವರ

ಹೆಸರು ಮತ್ತು ವಿಳಾಸ : ಜನಪದ ಸೇವಾ ಟ್ರಸ್ಟ್ ,
ಮೇಲುಕೋಟೆ–೫೭೧೪೩೧

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆಮತ್ತು ನನ್ನ ನಂಬಿಕೆಯಂತೆ ನಿಜವೆಂದು ನಾನು ಸುರೇಂದ್ರ ಕೌಲಗಿ ಘೋಷಿಸುತ್ತೇನೆ.

ದಿನಾಂಕ: ೭–೩–೨೦೦೮
ಮೇಲುಕೋಟೆ–೫೭೧೪೩೧

ಪ್ರಕಾಶಕ(ಸಹಿ)
ಸುರೇಂದ್ರ ಕೌಲಗಿ

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

೧) ಶ್ರೀ.ಕೆ.ಎಸ್. ಗೋಪಿನಾಥ್, ಬೆಂಗಳೂರು
೨) ಶ್ರೀ.ಎಂ.ಕೆ.ಸುಬ್ಬರಾವ್, ಬೆಂಗಳೂರು
೩) ಶ್ರೀ.ಎಂ.ಕೆ. ಶಿವ ಸ್ವಾಮಿ, ಬೆಂಗಳೂರು
೪) ಶ್ರೀ. ಎಂ.ಕೆ.ಶಂಕರ್, ಬೆಂಗಳೂರು
೫) ಶ್ರೀ. ಎಂ.ಕೆ. ಅನಂತಸ್ವಾಮಿ, ಬೆಂಗಳೂರು
೬)ಶ್ರೀ. ಕೆ.ಪಿ. ಲಕ್ಷ್ಮೀಕಾಂತರಾಜೇ ಅರಸ್,ತುಮಕೂರು
೭)ಶ್ರೀ. ತೈಲೂರು ವೆಂಕಟಕೃಷ್ಣ, ಮಂಡ್ಯ
೮) ಶ್ರೀ.ತುಳಸೀರಾಮ್, ಮುಳಬಾಗಿಲು

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ ಮಾನ್ಯ

೧) ಹೆಚ್. ಆರ್. ಚೆಲುವರಾಜ್,ಬೆಂಗಳೂರು
೨) ಡಾ॥ ಕೆ.ಸಿ.ವೆಂಕಟೇಶ್, ಮಂಡ್ಯ
೩) ಶ್ರೀ. ಡಿ.ಎಸ್. ಬಾಲಕೃಷ್ಣನ್, ಮೈಸೂರು ಇವರಿಗೆ ಕೃತಜ್ಞತೆಗಳು

ಸನ್ಮಾನ್ಯರಿಂದ

ಜನೆವರಿ ಮಾಹೆಯ ಸಂಚಿಕೆ 'ಜನಪದ ವಿಚಾರ'ದಲ್ಲಿ ಗಾಯತ್ರಿ ಮಂತ್ರವನ್ನು ತಪ್ಪಾಗಿ ಅಚ್ಚು ಮಾಡಲಾಗಿದೆ. ಮಂತ್ರದ ನಾಲ್ಕನೇ ಸಾಲಿನಲ್ಲಿ 'ಯೋ' ಎಂಬುದು ಅಚ್ಚಾಗಿಲ್ಲ.

– ಬಿ.ಕೆ.ಸೀತಾರಾಮ್, ಮೈಸೂರು

(ಈ ತಪ್ಪನ್ನು ಗಮನಕ್ಕೆ ತಂದ ಓದುಗರಿಗೆ ವಂದನೆಗಳು)

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ಮುಖ ಪುಟ ಚಿತ್ರ ಕೃಪೆ : ಡೆಕ್ಕನ್ ಹೆರಾಲ್ಡ್

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA **-** Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net